26 ಆಗಸ್ಟ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 167 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಜನಮನದ ದನಿ


# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಶಿಮ್ಕೆಂಟ್‌ನಲ್ಲಿ ನಡೆಯುತ್ತಿರುವ 16ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಗೇಮ್ಸ್ ಚಾಂಪಿಯನ್ ನೀರೂ ಢಂಡಾ ಅವರು ಚಿನ್ನದ ಪದಕಕ್ಕೆ ಕೊರಳೊಡ್ಡಿದರು.





ಹಬ್ಬಗಳು ನಮ್ಮ ಬದುಕಿನಿಂದ ಇನ್ನೂ ದೂರ ಸರಿದಿಲ್ಲ » 2


ಗ್ರಾಮೀಣ ಜನತೆ ಆರೋಗ್ಯ ನಿರ್ಲಕ್ಷ್ಯಸಬೇಡಿ » 3


ಜಿಲ್ಲೆಯಲ್ಲಿ ಗೌರಿ-ಗಣೇಶ ಹಬ್ಬದ ಸಂಭ್ರಮ » 4


# ಆವೇಶದ ಮಾತು ತಂದ ಆಪತ್ತು: ರಣಾಂಗಣವಾದ ವಿಶೇಷ ಸಭೆ

## ಶಾಸಕ ಹೆಚ್.ಪಿ.ಸ್ವರೂಪ್-ಸದಸ್ಯ ಮೋಹನ್ ನಡುವೆ ಏಕವಚನದ ವಾಗ್ವಾಳಿ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆ ಕುವೆಂಪು ಸಭಾಂಗಣದಲ್ಲಿ ಸೋಮವಾರ ಕರೆದಿದ್ದ ವಿಶೇಷ ಸಭೆಯು ಶಾಸಕ ಹೆಚ್.ಪಿ.ಸ್ವರೂಪ್ ಹಾಗು ಬಿಜೆಪಿ ಸದಸ್ಯ ಮೋಹನ್ ನಡುವೆ ವಾಕ್ಸಮರಕ್ಕೆ ಕಾರಣ ವಾಯಿತು.

ಗುಂಡಿಮುಚ್ಚುವ ಕಾಮಗಾರಿ, ಬೀದಿ ನಾಯಿಗಳ ಸೆರೆ ಕಾರ್ಯಾಚರಣೆಗೆ ಅನು ಮೋದನೆ ಪಡೆಯುವ ಸಂಬಂಧ ಪ್ರಭಾರ ಮೇಯರ್ ಹೇಮಲತಾ ಕಮಲ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ಹಮ್ಮಿ ಕೊಳ್ಳಲಾಗಿತ್ತು. ಸಭೆ ಆರಂಭವಾದಾಗಿನಿಂದಲೂ ಶಾಸಕ ಸ್ವರೂಪ್ ಅವರೇ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಮಧ್ಯ ಪ್ರವೇಶಿಸಿದ ಸದಸ್ಯ ಮೋಹನ್ ಅವರು, ಶಾಸಕರೇ ಮೇಯರ್ ಅವರಿಗೂ ಮಾತನಾಡಲು ಅವಕಾಶ ಕೊಡಿ, ನೀವೊಬ್ಬರೇ ಮಾತನಾಡಿದರೆ ಹೇಗೆ, ಎಲ್ಲರೂ ಹುಟ್ಟುತ್ತಾ ಜ್ಞಾನಿಗಳಲ್ಲ. ಅವರು ಹಂತ -ಹಂತವಾಗಿ ಕಲಿಯುತ್ತಾರೆಂದರು.

ಮೇಯರ್ ಹೇಮಲತಾ ಅವರು ಕೂಡ ಒಂದೆರಡು ಮಾತುಗಳನ್ನಾಡಿ ಸುಮ್ಮನಾದರು. ನಂತರ 15ನೇ ಹಣಕಾಸು ಯೋಜನೆ ಅನುದಾನ ಹಂಚಿಕೆ ಕುರಿತು ಶಾಸಕ ಸ್ವರೂಪ್ ಪ್ರತಿಕ್ರಿಯಿಸುತ್ತಿದ್ದಾಗ ಎದ್ದು ನಿಂತ ಮೋಹನ್, ಶಾಸಕರೇ ನೀವು ಇಲ್ಲಿಗೆ ಕೇವಲ ಸದಸ್ಯರು ಮಾತ್ರ. ಅಧ್ಯಕ್ಷರ ರೀತಿ ಎಲ್ಲದಕ್ಕೂ ಉತ್ತರಿಸಬೇಡಿ. ಸುಮ್ಮನೆ ಕೂತಿರಿ ಎಂದರು. ಆಕ್ರೋಶಗೊಂಡ ಶಾಸಕರು, ನನಗೆ ಸುಮ್ಮನೆ ಕೂರು ವಂತೆ ಹೇಳಲು ನೀನ್ಯಾರು, ಏನಂತ ಮಾತ ನಾಡುತ್ತಿದ್ದೀರಿ ಎಂದು ಏಕವಚನದಲ್ಲಿ ಹರಿ ಹಾಯ್ದಾಗ ಮೋಹನ್ ಸಹ ಗಂಭೀರರಾದರು. ಈ ವೇಳೆ ಜೆಡಿಎಸ್ ಸದಸ್ಯರು ಮೋಹನ್ ಅವರತ್ತ ನುಗ್ಗಿ ಬಂದು ವಾಗ್ವಾಳಿ ನಡೆಸಿದರು. ಆಗ ಸಭೆ ರಣಾಂಗಣವಾಗಿ ಮಾರ್ಪಟ್ಟಿತು.



ಶಾಸಕ ಸ್ವರೂಪ್ ಅವರು ಮಾತನಾಡಿ, ಸಭೆಯಲ್ಲಿ ಹೇಗಿರಬೇಕೆಂಬುದನ್ನು ಮೊದಲು ಕಲಿಯಿರಿ. ಸಭೆಯ ಅರ್ಥವನ್ನು ಹಾಳು ಮಾಡಬೇಡಿ. ನನಗೆ ಸುಮ್ಮನಿರುವಂತೆ ಹೇಳಲು ನೀವ್ಯಾರು ಎಂದು ಏರು ದನಿಯಲ್ಲಿ ತರಾಟೆಗೆ ತೆಗೆದುಕೊಂಡರು. ಜೆಡಿಎಸ್ ಸದಸ್ಯರು ಸಹ, ಅವ್ರು ಎಂಎಲ್‌ಎ ಅವರ ಬಗ್ಗೆ ಏನ್ ಮಾತಾಡ್ತಿದಿರಾ. ಅವರಿಗೆ ಬೆಲೆ ಕೊಡ ಬೇಕೆಂದು ತೀವ್ರ ತರಾಟೆಗೆ ತೆಗೆದುಕೊಂಡರು.

**ನಮ್ಮ ಶಾಸಕರಿಗೂ ಅವಮಾನವಾಗಿತ್ತು**

ಮೋಹನ್ ಅವರು ಮಾತನಾಡಿ, ಮಾಜಿ ಶಾಸಕ ಪ್ರೀತಮ್ ಗೌಡ ಅವರಿಗೂ ನೀವು ಹೀಗೆ ಹೇಳಿದ್ದೀರಿ. ಆಗ ಅವರಿಗೆ ಎಷ್ಟು ನೋವಾಗಿತ್ತು ಅಂತ ನಿಮಗೆ ಗೊತ್ತಾ. ಆ ಘಟನೆ ಬಳಿಕ ಅವರು ನಗರಸಭೆಗೆ ಬರಲಿಲ್ಲ ವೆಂದು ಭಾವುಕರಾದರು. ಕೆಲ ಹೊತ್ತಿನ ಬಳಿಕ ಮೋಹನ್ ಅವರೇ ಮಾತನಾಡಿ, ಶಾಸಕರೇ ನನ್ನನ್ನು ಕ್ಷಮಿಸಿ ಆವೇಶದಲ್ಲಿ ಮಾತನಾಡಿದ್ದೇನೆ. ಮಾತಿನಿಂದ ಯಾರಿಗೆ ನೋವಾಗಿದ್ದರೂ ಕ್ಷಮೆಯಾಚಿಸುತ್ತೇನೆ ಎಂದಾಗ ಪರಿಸ್ಥಿತಿ ತಿಳಿಯಾಯಿತು.

**100 ಕೋ. ರೂ. ಅನುದಾನದ ಭರವಸೆ**

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಹಾಸನ ಮೇಲ್ದರ್ಜೆಗೆ ಏರಿದೆ. ಮೂಲ ಸೌಕರ್ಯಕ್ಕಾಗಿ ಸರ್ಕಾರ 200 ಕೋ.ರೂ. ಕೊಡಬೇಕಿತ್ತು. ಆದರೆ, ಮೂರು ವರ್ಷಗಳ ಕಾಲ ಹಣ ಬಿಡುಗಡೆ ಅಸಾಧ್ಯವೆಂದು ಹೇಳಿದೆ. ಈ ಸಂಬಂಧ ನಾನು ಮುಖ್ಯಮಂತ್ರಿ, ಸಂಬಂಧಪಟ್ಟ ಸಚಿವರ ಜೊತೆ ಚರ್ಚಿಸಿದ ಬಳಿಕ 100 ಕೋ.ರೂ. ನೀಡುವ ಭರವಸೆ ನೀಡಿದ್ದಾರೆ. ಅಕ್ಟೋಬರ್ ವೇಳೆಗೆ ಸದಸ್ಯರ ಅವಧಿ ಮುಗಿಯುವ ಸಾಧ್ಯತೆ ಇದೆ. ಸುಮ್ಮನೆ ಗೊಂದಲ ಸೃಷ್ಟಿಸುವ ಬದಲು ವಾರ್ಡ್‌ಗಳ ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕು. ಸದ ಸ್ಯರಿಗೆ ತಮ್ಮ ತಮ್ಮ ವಾರ್ಡ್‌ಗಳಷ್ಟೇ ಮುಖ್ಯ.

> **ಗಲಾಟೆ ಮಾಡುವುದರಿಂದ ಯಾವ ಪ್ರಯೋಜನವಿಲ್ಲ. ನಾನು ಜನರ ಸೇವೆ ಗಾಗಿ ಶಾಸಕನಾಗಿದ್ದೇನೆ, ನೀವು ಪಾಲಿಕೆ ಸದಸ್ಯರಾಗಿದ್ದಿರಿ. 35 ವಾರ್ಡ್‌ಗಳ ಜೊತೆಗೆ ಹೊಸದಾಗಿ ಸೇರಿರುವ 37 ಹಳ್ಳಿಗಳಿಗೂ ಸೌಲಭ್ಯ ಕಲ್ಪಿಸುವುದು ನಮ್ಮ ಕರ್ತವ್ಯ.**
> **-ಹೆಚ್.ಪಿ. ಸ್ವರೂಪ್, ಶಾಸಕ**

> **ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಘೋಷಿಸಿರುವುದು ಸಾಧನೆಯಲ್ಲ. ಅದೇ ರೀತಿ ಅಭಿ ವೃದ್ಧಿಗೆ ಅನುದಾನವನ್ನು ಸರ್ಕಾರ ನೀಡಬೇಕು. ಮೂರು ವರ್ಷ ಒಂದು ರೂಪಾಯಿ ನೀಡುವುದು ಅಸಾಧ್ಯವೆಂದು ಸರ್ಕಾರ ಹೇಳಿದೆ. ಹೀಗಾಗಿ ಸ್ಥಳೀಯ ಅನುದಾನವನ್ನಷ್ಟೇ ನಂಬಿ ನಗರ ಅಭಿವೃದ್ಧಿಗೆ ಗಮನ ಹರಿಸ ಬೇಕು.**
> **-ಡಾ. ಸೂರಜ್ ರೇವಣ್ಣ, ಎಂಎಲ್‌ಸಿ**

» ನಾಲ್ಕನೇ ಪುಟದಲ್ಲಿ

# ಎಂಸಿಇ ಅಧ್ಯಕ್ಷರ ವಿರುದ್ಧ ತಿರುಗಿ ಬಿದ್ದ ವಿರೋಧಿ ಬಣ

- 15 ದಿನದಲ್ಲಿ ಅವಿಶ್ವಾಸ ಗೊತ್ತುವಳಿ ಸಭೆ ಕರೆಯಲು ಆಗ್ರಹ
- 12 ಮಂದಿ ನಿರ್ದೇಶಕರ ಪತ್ರ ರವಾನೆ

• ಪ್ರಜೋದಯ ವರದಿ

**ಹಾಸನ :** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರು, ಕಾರ್ಯದರ್ಶಿ ಹಾಗು ಖಜಾಂಚಿಯ ವಿರುದ್ಧ ಸಂಸ್ಥೆಯ 12 ಮಂದಿ ನಿರ್ದೇಶಕರು ಅವಿಶ್ವಾಸ ಮಂಡನೆ ಸಭೆಯನ್ನು ಕರೆಯುವಂತೆ ಕೋರಿಕೆ ಸಲ್ಲಿಸಿದ್ದಾರೆ.

ಅಧ್ಯಕ್ಷರಾದ ಆರ್.ಟಿ. ದ್ಯಾವೇಗೌಡ, ಕಾರ್ಯದರ್ಶಿ ಸಿ.ಆರ್.ಜಗದೀಶ್ ಹಾಗು ಖಜಾಂಚಿ ಪಾರ್ಶ್ವನಾಥ್ ಅವರ ವಿರುದ್ಧ ಅವಿಶ್ವಾಸ ವ್ಯಕ್ತಪಡಿಸಿರುವ ನಿರ್ದೇಶಕರು ಈ ಮೂವರಿಗೂ ನೋಟೀಸ್ ನೀಡಿ 15ದಿನಗಳ ಒಳಗಾಗಿ ಆಡಳಿತ ಮಂಡಳಿ ಸಭೆಯನ್ನು ಕರೆಯುವಂತೆ ಆಗ್ರಹಿಸಿದ್ದಾರೆ.

ಅವಿಶ್ವಾಸ ಗೊತ್ತುವಳಿ ಮಂಡನೆ ಸಭೆ ಕರೆಯುವಂತೆ ಸಲ್ಲಿಸಲ್ಪಟ್ಟ ಪತ್ರಕ್ಕೆ ಸಂಸ್ಥೆಯ ನಿರ್ದೇಶಕರಾದ ಬಿ.ಆರ್.ಗುರುದೇವ್, ಅರ್ಜುನ್ ಗುರುದೇವ್, ಗುರಪ್ಪ, ಎಸ್.ಜಿ. ಶ್ರೀಧರ, ಡಾ||ಡಿ.ಸಿ.ಅರವಿಂದ್, ಸಂಸ್ಥೆಯ ಮಾಜಿ ಅಧ್ಯಕ್ಷರೂ ಆದ ಅಶೋಕ್ ಹಾರನಹಳ್ಳಿ, ಅನೂಪ್ ಹಾರನಹಳ್ಳಿ, ಕಾರ್ತಿಕ್ ಎಸ್. ಬಪಟ್, ಪಿ.ಎಸ್.ಸುರೇಶ್, ಜಿ.ಟಿ.ಕುಮಾರ್, ಕೆ.ಎಂ.ಶಿವಣ್ಣ, ಕೆ.ಎ.ಪ್ರಭಾಕರ್ ಅವರು ಸಹಿ ಮಾಡಿದ್ದು, ಸಭೆ ಕರೆಯುವಂತೆ ಕೋರಿದ ಪತ್ರವನ್ನು ನೋಂದಾಯಿತ ಅಂಚೆ ಮೂಲಕ ಅಧ್ಯಕ್ಷರು, ಕಾರ್ಯದರ್ಶಿ ಹಾಗು ಖಜಾಂಚಿ ಅವರಿಗೆ ಕಳುಹಿಸಿಕೊಟ್ಟಿದ್ದಾರೆ.

ಸಂಸ್ಥೆಯ ಆಡಳಿತ ಮಂಡಳಿಯಲ್ಲಿ 24 ಮಂದಿ ನಿರ್ದೇಶಕರಿದ್ದು, ಅವಿಶ್ವಾಸ ಗೊತ್ತುವಳಿ ಗೆಲ್ಲಲು 13 ಮಂದಿ ಸದಸ್ಯರ ಬೆಂಬಲ ಬೇಕಾಗುತ್ತದೆ. 12 ಮಂದಿ ಅವಿಶ್ವಾಸ ಮಂಡನೆಗೆ ಮುಂದಾಗಿರುವುದರಿಂದ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ ಹಾಗು ಖಜಾಂಚಿ ಅವರ ಹುದ್ದೆಗೆ ಧಕ್ಕೆ ಬರಬಹುದೆಂದು ಹೇಳಲಾಗುತ್ತಿದೆ.

# ಅಟ್ರಾಸಿಟಿ: 60 ದಿನದೊಳಗೆ ಚಾರ್ಜ್ ಶೀಟ್ ಸಲ್ಲಿಸಿ

• ಪ್ರಜೋದಯ ವರದಿ

**ಬೆಂಗಳೂರು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ 60 ದಿನಗಳೊಳಗಾಗಿ ಚಾರ್ಜ್ ಶೀಟ್ ನ್ಯಾಯಾಲಯಕ್ಕೆ ಸಲ್ಲಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ನಡೆದ ಪರಿಶಿಷ್ಟ ಜಾತಿ-ಪಂಗಡಗಳ ರಾಜ್ಯ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆರು ತಿಂಗಳಲ್ಲಿ ಶೇ.84 ರಷ್ಟು ಪ್ರಕರಣ ಗಳಲ್ಲಿ ಮಾತ್ರ ನಿಗದಿತ ಅವಧಿಯ ಒಳಗಾಗಿ ಆರೋಪ ಪಟ್ಟಿ ಸಲ್ಲಿಸಲಾ ಗಿದೆ. ಶೇ.100 ಪ್ರಕರಣಗಳಲ್ಲಿ 60ದಿನಗಳ ಒಳಗಾಗಿ ಕಡ್ಡಾಯವಾಗಿ ಆರೋಪ ಪಟ್ಟಿ ಸಲ್ಲಿಸಲು ಕ್ರಮ ಕೈಗೊಳ್ಳ ಬೇಕೆಂದು ನಿರ್ದೇಶನ ನೀಡಿದರು.

ನ್ಯಾಯಾಲಯದಲ್ಲಿ 56 ಪ್ರಕರಣ ಗಳಲ್ಲಿ ತಡೆಯಾಜ್ಞೆ ಇದ್ದು, ಇದನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳ ಬೇಕು. ರಾಜ್ಯದಲ್ಲಿ ದೌರ್ಜನ್ಯ ಪ್ರಕರಣಗಳ ತ್ವರಿತ ವಿಚಾರಣೆಗಾಗಿ 11 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ಪ್ರಕರಣಗಳ ಸರಿಯಾದ ವಿಚಾರಣೆ ನಡೆಸಿ, ತ್ವರಿತವಾಗಿ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಶಿಕ್ಷೆಯ ಪ್ರಮಾಣ ಶೇ.10 ರಷ್ಟಿದ್ದು, ಇದು ಹೆಚ್ಚಾಗಬೇಕು. ಆರೋಪಿಗಳ ಜೊತೆ ಪೊಲೀಸರು ಶಾಮೀಲಾಗಿರುವುದು ಕಂಡು ಬಂದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.



**ಸುಳ್ಳು ಜಾತಿ ಪ್ರಮಾಣ ಪತ್ರ: ಕ್ರಮ ಕೈಗೊಳ್ಳಿ**

ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ನ್ಯಾಯಾಲಯಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪ್ರಕರಣಗಳ ಕುರಿತು ತೀರ್ಪು ಬಂದರೂ, ತೀರ್ಪು ಜಾರಿಗೆ ಯಾಕೆ ಬಾಕಿ ಇದೆ. ಪ್ರಸ್ತುತ ಸುಳ್ಳು ಜಾತಿ ಪ್ರಮಾಣ ಪತ್ರ ಸಾಬೀತಾಗಿರುವ 170 ಪ್ರಕರಣಗಳಿದ್ದು, ತಕ್ಷಣ ಕ್ರಮ ಕೈಗೊಳ್ಳಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಸರ್ಕಾರದ ಸೌಲಭ್ಯಗಳನ್ನು ಪಡೆದಿರುವುದು ಸಾಬೀತಾದರೆ ಅದನ್ನು ಮರಳಿ ಪಡೆಯಲು ಕ್ರಮ ಕೈಗೊಳ್ಳಬೇಕು. ಈ ಕುರಿತು ಇಲಾಖೆಗಳ ನಡುವೆ ಸಮನ್ವಯತೆ ಅಗತ್ಯವಿದ್ದು, ಸಮಗ್ರ ವರದಿಯನ್ನು ಸಲ್ಲಿಸಬೇಕೆಂದು ಸಿದ್ದರಾಮಯ್ಯ ಅವರು ಸೂಚಿಸಿದರು.

# ಹೊಡೆದಾಡಿಕೊಂಡ ಗ್ರಾಮ ಲೆಕ್ಕಾಧಿಕಾರಿಗಳು

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರಾ ಮಹೋತ್ಸವಕ್ಕೂ ಮೊದಲೇ ಹಾಸನಾಂಬ ದೇಗುಲದ ಆವರಣದಲ್ಲೇ ಗ್ರಾಮ ಲೆಕ್ಕಾಧಿಕಾರಿಗಳು ಹೊಡೆದಾಡಿಕೊಂಡಿರುವ ಘಟನೆ ಸೋಮವಾರ ನಡೆದಿದೆ. ಗ್ರಾಮ ಲೆಕ್ಕಾಧಿಕಾರಿ ಪರಮೇಶ್ ಮತ್ತು ಪ್ರಸಾದ್ ಹೊಡೆದಾಡಿ ಕೊಂಡವರು.

ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧ್ಯಕ್ಷತೆಯಲ್ಲಿ ಹಾಸನಾಂಬ ಉತ್ಸವ ಪೂರ್ವಭಾವಿ ಸಿದ್ಧತಾ ಸಭೆ ನಡೆಯಲಿದೆ. ಈ ಹಿನ್ನಲೆ ಸೋಮವಾರ ಗ್ರಾಮ ಲೆಕ್ಕಾಧಿಕಾರಿಗಳಿಂದ ದೇವಸ್ಥಾನಕ್ಕೆ ಸಂಬಂಧಿಸಿದ ಕೆಲಸ ಮಾಡಿಸಲಾಗುತ್ತಿತ್ತು. ಈ ವೇಳೆ ಪರಮೇಶ್ ಅವರು ಅನಾರೋಗ್ಯದ ಕಾರಣ ಕೆಲಸ ಮಾಡಲಾಗದೆ ಕುಳಿತಿದ್ದರು ಎನ್ನಲಾಗಿದೆ. ಇದೇ ವಿಚಾರಕ್ಕೆ ಪ್ರಸಾದ್ ವಾಗ್ವಾದ ನಡೆಸಿದ್ದರಿಂದ ಇಬ್ಬರು ಪರಸ್ಪರ ಹೊಡೆದಾಡಿ ಕೊಂಡಿದ್ದಾರೆ. ಈ ವಿಚಾರ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಅಧಿಕಾರಿಗಳ ಸಮ್ಮುಖದಲ್ಲಿ ರಾಜೀ ಸಂಧಾನಕ್ಕೆ ಪ್ರಯತ್ನಿಸಲಾಯಿತು.

# ಹಿಂದೂ-ಮುಸ್ಲಿಂ ಬೇರ್ಪಡಿಸುವುದು ಸೂಕ್ತವಲ್ಲ

## ಬಾನುಮುಷ್ತಾಕ್ ದಸರಾ ಉದ್ಘಾಟನೆಗೆ ವಿರೋಧವಿಲ್ಲ : ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಹಾಸನ:** ದಸರಾ ಉದ್ಘಾಟನೆ ವಿಚಾರದಲ್ಲಿ ಹಿಂದೂ-ಮುಸ್ಲಿಂ ಎಂದು ಬೇರ್ಪಡಿಸುವುದು ಸೂಕ್ತವಲ್ಲ. ನಾವೆಲ್ಲಾ ಒಂದೇ ಭಾರತೀಯರೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹೇಳಿದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರ ವಿರೋಧ ವಿಚಾರವಾಗಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾನುಮುಷ್ತಾಕ್ ನಮ್ಮ ಜಿಲ್ಲೆಯ ಮಹಿಳಾ ಪರ ಹೋರಾಟಗಾರ್ತಿ. ಉದ್ಘಾಟನೆ ಮಾಡಲಿ, ನನಗೆ ಸಂತೋಷ ಇದೆ. ಅದರಲ್ಲಿ ಹಿಂದೂ-ಮುಸ್ಲಿಂ ಬೇಧ-ಭಾವ ಮಾಡ ಬಾರದು. ಯಾರಾದರೂ ವಿರೋಧ ಮಾಡಲಿ. ಹಿಂದೂ, ಮುಸ್ಲಿಂ ಯಾವುದೂ ಇಲ್ಲ, ನಾವೆಲ್ಲ ಒಂದೇ ಎಂದು ಹೇಳಿದರು.

ರಾಜಕೀಯದಲ್ಲಿ ಏಳು, ಬೀಳು ಇದ್ದೇ ಇರುತ್ತದೆ. ಜಿಲ್ಲೆಯ ಮಹಿಳೆಗೆ ಒಂದು ಅವಕಾಶ ಕೊಟ್ಟಿದ್ದಾರೆ. ಅವರೂ ಹೋರಾಟ ಮಾಡಿಕೊಂಡು ಬಂದಿರುವವರು. ಬಾನುಮುಷ್ತಾಕ್ ಅವರು ದೇವೇಗೌಡರ ಕಾಲದವರು. ರಾಜಕೀಯ ಬಿಟ್ಟಾಕಿ, ಇದಕ್ಕೆಲ್ಲಾ ವಿರೋಧ ಮಾಡಬಾರದು. ಅಬ್ದುಲ್ ಕಲಾಂ ರಾಷ್ಟ್ರಪತಿ ಆಗಿರಲಿಲ್ಲವೇ, ದೇವೇಗೌಡರು ಅವರನ್ನು ಹೇಗೆ ನಡೆಸಿಕೊಂಡರೆಂದು ಪ್ರಶ್ನಿಸಿದರು.



ನಾನು 25 ಕೋಟಿ ಖರ್ಚು ಮಾಡಿ ಮುಸ್ಲಿಂ ಬಡಾವಣೆಯಲ್ಲಿ ರಸ್ತೆ ಮಾಡಿಸಿದ್ದೇನೆ. ನಾನು ವೋಟಿಗಾಗಿ ರಸ್ತೆ ಮಾಡಲಿಲ್ಲ. 40 ವರ್ಷದಿಂದ ಕಾಂಗ್ರೆಸ್ ಏಕೆ ಮಾಡಲಿಲ್ಲ. ಶಾಸಕನಾಗಿ ನನ್ನ ಜವಾಬ್ದಾರಿ, ವೋಟು ಕೊಡಲ್ಲವೆಂದು ಕೆಲಸ ಮಾಡದೆ ಇರಲು ಆಗುತ್ತಾ, ನನ್ನ ಜೀವ ಇರುವವರೆಗೂ ಜಿಲ್ಲೆಯ ಜನರನ್ನು ಮರೆಯಲು ಆಗಲ್ಲವೆಂದು ತಿಳಿಸಿದರು.

**ಧರ್ಮಸ್ಥಳ ಶಕ್ತಿ ಹಾಳು ಮಾಡಲು ಹೊರಟಿದ್ದಾರೆ**

ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಪ್ರಶ್ನೆಗೆ ಧರ್ಮಸ್ಥಳದ ವಿಷಯದ ಬಗ್ಗೆ ಈಗ ಹೇಳಲ್ಲ, ರಾಜ್ಯ ಸರ್ಕಾರ ತನಿಖೆ ನಡೆಸುತ್ತಿದೆ. ಎರಡೂ ಸರ್ಕಾರಗಳು ಒಬ್ಬರ ಮೇಲೊಬ್ಬರು ಆರೋಪ ಮಾಡಿಕೊಳ್ಳುತ್ತಿದ್ದಾರೆ. ಧರ್ಮಸ್ಥಳದ ಬಗ್ಗೆ ನಮ್ಮದೇ ಆದ ಗೌರವವಿದೆ. ಕೆಲವರು ಅದರ ಶಕ್ತಿ ಹಾಳುಮಾಡಲು ಹೋಗಿದ್ದಾರೆ. ಸರ್ಕಾರ ಅದಕ್ಕೆ ಅವಕಾಶ ಕೊಡಬಾರದಿತ್ತು ಎಂದು ತಿಳಿಸಿದರು.

ಡಾ.ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳವನ್ನು ಸರಿಯಾಗಿ ನಡೆಸಿಕೊಂಡು ಬಂದಿದ್ದಾರೆ. ರಾಜಕೀಯ ಮಾಡದೆ ಎಲ್ಲರನ್ನೂ ಸಮನಾಗಿ ನಡೆಸಿಕೊಂಡು ಬಂದಿದ್ದಾರೆ. ತಪ್ಪು ಮಾಡಿದಾಗ ಧರ್ಮಸ್ಥಳಕ್ಕೆ ಬಂದು ಸತ್ಯ ಮಾಡಿ ಅಂತಾರೆ. ನಾನೂ ಆಣೆ ಮಾಡಿರುವುದನ್ನು ನೋಡಿದ್ದೇನೆ. ಮಂಜುನಾಥಸ್ವಾಮಿಗೆ ಅಪಾರ ಶಕ್ತಿ ಇದೆ. ಆ ದೇವರ ಶಕ್ತಿ ಬಗ್ಗೆ ಮಾತನಾಡುವ ಶಕ್ತಿ ನನಗಿಲ್ಲವೆಂದರು.

**ಜಿಲ್ಲೆ ಅಭಿವೃದ್ಧಿ ಕುಂಠಿತ**

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಎರಡು ವರ್ಷ ತುಂಬಿದೆ. ಜಿಲ್ಲೆಯಲ್ಲಿ ಅಭಿವೃದ್ಧಿ ಕುಂಠಿತವಾಗಿದ್ದು, ಈಗಲಾ ದರೂ ಕೆಲಸ ಮಾಡಲಿ ಎಂದು ಆಶಿಸುತ್ತೇನೆ. ಕಳೆದ ನಾಲ್ಕು ವರ್ಷದಿಂದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಮಾಡಿಲ್ಲ. ಯಾವಾಗ ನಡೆಯುತ್ತದೆ ಎಂಬುದು ಗೊತ್ತಿಲ್ಲ ಎಂದರು.

> **ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷರನ್ನಾಗಿ ಯಾರನ್ನು ಮಾಡಬೇಕೆಂದು 13 ನಿರ್ದೇಶಕರು ಚರ್ಚಿಸಿ ತೀರ್ಮಾನ ತೆಗೆದು ಕೊಳ್ಳುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಬೆರೆಸ ಬಾರದು. ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಬ್ಯಾಂಕ್ ಕಾರ್ಯ ನಿರ್ವಹಿ ಸುತ್ತಿದೆ.**
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

# ಬಾಣಾವರ ಗ್ರಾ.ಪಂ.ಯಲ್ಲಿ ನಕಲಿ ವಸತಿ ಫಲಾನುಭವಿಗಳ ಸೃಷ್ಟಿ : ಆರೋಪ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿಗೆ ನಕಲಿ ಫಲಾನುಭವಿಗಳ ಆಯ್ಕೆ ಮಾಡಿದ್ದು ಭಾರೀ ಗೋಲ್ಮಾಲ್ ನಡೆದಿದೆ. ಹತ್ತಾರು ವರ್ಷಗಳಿಂದ ಭ್ರಷ್ಟರನ್ನು ಸಾಕಿ ಸಲಹುತ್ತಿರುವ ಶಾಸಕ ಕೆ.ಎಂ. ಶಿವಲಿಂಗೇಗೌಡ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಆಗ್ರಹಿಸಿದರು.

ಫಲಾನುಭವಿಗಳನ್ನು ಆಯ್ಕೆ ಮಾಡಲು ಗ್ರಾಮ ಸಭೆ ನಡೆಸಿ ಅರ್ಹರನ್ನು ಆಯ್ಕೆ ಮಾಡಬೇಕೇನ್ನುವ ನಿಯಮ ಗಾಳಿಗೆ ತರಲಾಗಿದೆ. ಆದರೆ, ಇದೀಗ ಬಾಣಾವರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶಾಮೀಲಾಗಿ ನಕಲಿ ಫಲಾನುಭವಿಗಳು ಎಂದು 90 ಜನರ ಆಧಾರ್ ಪಡೆದು ಪಟ್ಟಿ ಮಾಡಿ, ಖಾತೆಗೆ ಮೊದಲ ಕಂತಿನ ಹಣ 30 ಸಾವಿರ ರೂ. ಪಾವತಿಸಲಾಗಿದೆ. ಅಚ್ಚರಿಯ ಸಂಗತಿ ಎಂದರೆ ಉನ್ನತಾಧಿಕಾರಿಗಳ ಲಾಗಿನ್ ಹಾಗೂ ಪಾಸ್‌ವರ್ಡ್ ಕದಿಯಲಾಗಿದೆ. ಇದೀಗ ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ಅಂದಾಜು 1.35 ಕೋ. ರೂ.ಹಣ ಕೊಳ್ಳೆ ಹೊಡೆಯುವ ಸಂಚು ರೂಪಿಸಿರುವುದು ದಾಖಲೆಗಳಿಂದ ಬಹಿರಂಗವಾಗಿದೆ ಎಂದು ದಾಖಲೆಯ ಪ್ರತಿಗಳನ್ನು ಪ್ರದರ್ಶಿಸಿ ಶಾಸಕರೇ ಬಡಬಗ್ಗರ ಹಣ ತಿಂದು ಹೇಗೆ, ಗೌರಿ-ಗಣೇಶ ಹಬ್ಬ ಮಾಡುತ್ತೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ವಾಗ್ದಾಳಿ ನಡೆಸಿದರು.



ಮನೆಗಳ ಹಂಚಿ ಕಲೆ ಮಾಡುವ ಯೋಜನೆಯಲ್ಲಿ ದೊಡ್ಡ ಮಟ್ಟದ ಅವ್ಯವಹಾರ, ಗೋಲ್ಮಾಲ್ ನಡೆದಿದೆ ಎಂದು ಆಳಂದ ಶಾಸಕ, ಮುಖ್ಯಮಂತ್ರಿಗಳ ಆಪ್ತ ಬಿ.ಆರ್.ಪಾಟೀಲ್ ಮಾಡಿದ್ದ ಆರೋಪ ನಿಜವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಇಲಾಖೆಯಲ್ಲಿ ಇಂತಹದ್ದೊಂದು ಬಹುದೊಡ್ಡ ಹಗರಣ ನಡೆದಿದ್ದು, ತಪ್ಪಿತಸ್ಥರನ್ನು ಶಿಕ್ಷಿಸಿ ಅಮಾಯಕರಿಗೆ ನ್ಯಾಯ ದೊರಕಿಸಬೇಕು. ಹಗರಣ ಮರೆಮಾಚಲು ಮುಂದಾಗಿರುವ ಅಧಿಕಾರಿಗಳು ನಕಲಿ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಅಂದಾಜು 27 ಲ.ರೂ.

» ಮೂರನೇ ಪುಟದಲ್ಲಿ

# ಜಿಲ್ಲೆಗಿಂದು ಉಸ್ತುವಾರಿ ಸಚಿವ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಆ.26 ರಂದು ಜಿಲ್ಲಾ ಪ್ರವಾಸ ಮಾಡಲಿದ್ದಾರೆ. ಅಂದು ಬೆಳಿಗ್ಗೆ 10.30 ಕ್ಕೆ ನಗರಕ್ಕೆ ಆಗಮಿಸಿ ಪಕ್ಷದ ಮುಖಂಡರುಗಳೊಂದಿಗೆ ಚರ್ಚೆ ನಡೆಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಾರ್ವಜನಿಕರ ಭೇಟಿ ಮಾಡಲಿದ್ದಾರೆ. ಮಧ್ಯಾಹ್ನ 1.30 ಕ್ಕೆ ಹಾಸನಾಂಬ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಕುರಿತ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲಿದ್ದಾರೆ.

# ಹೊಸ ಟೆಂಡರ್ ವಿರುದ್ಧ ಲಾರಿ ಮಾಲೀಕರು-ಚಾಲಕರ ಮುಷ್ಕರ

## ಪ್ರತಿಭಟನಾಕಾರರ ಮನವೊಲಿಸಿದ ಶಾಸಕ ಸ್ವರೂಪ್

• ಪ್ರಜೋದಯ ವರದಿ

**ಹಾಸನ:** ಹೊಸ ಟೆಂಡರ್‌ನಿಂದ ಅನ್ಯಾಯವಾಗುತ್ತಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಬದಲಾವಣೆ ಮಾಡಬೇಕೆಂದು ಆಗ್ರಹಿಸಿ ನಗರದ ಹೆಚ್‌ಪಿಸಿಎಲ್ ಬಳಿ ಲಾರಿ ಚಾಲಕರು ಮತ್ತು ಮಾಲೀಕರು ಸೋಮವಾರದಿಂದ ಮುಷ್ಕರ ಆರಂಭಿಸಿದ್ದರು. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು ಪ್ರತಿಭಟನಾಕಾರರ ಮನವೊಲಿಸಿ ಮುಷ್ಕರ ಕೈಬಿಡುವಂತೆ ಮಾಡಿದರು.

ಹೊಸ ಟೆಂಡರ್ ಪ್ರಕ್ರಿಯೆಯಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಲಾರಿ ಮಾಲೀಕರಿಗೆ ಹಾಗು ಚಾಲಕರಿಗೆ ಅನ್ಯಾಯವಾಗುತ್ತಿದೆ. ಕೂಡಲೇ ಸರಿಪಡಿಸಿ ನ್ಯಾಯ ಒದಗಿಸ ಬೇಕೆಂಬುದು ಲಾರಿ ಚಾಲಕರು ಒತ್ತಾಯಿಸಿದರು.



ಶಾಸಕ ಹೆಚ್.ಪಿ.ಸ್ವರೂಪ್ ಮಾತನಾಡಿ, ಹೆಚ್‌ಪಿಸಿಎಲ್‌ಗೆ ಸಂಬಂಧಪಟ್ಟಂತೆ ಲಾರಿ ಚಾಲಕರು ಹಾಗು ಮಾಲೀಕರು ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವು ಸಮಸ್ಯೆಗಳಾಗಿವೆ ಎಂದು ಮುಷ್ಕರ ಹಮ್ಮಿಕೊಂಡಿದ್ದರು. ಕಳೆದ ವರ್ಷವಷ್ಟೇ ಕರೆದಿದ್ದ ಟೆಂಡರ್‌ನಲ್ಲಿ ಸಣ್ಣಪುಟ್ಟ ಲೋಪದೋಷಗ

» ಮೂರನೇ ಪುಟದಲ್ಲಿ


# ಇಂದು ಮಾಡಾಳು ಸ್ವರ್ಣ ಗೌರಿ ಪ್ರತಿಷ್ಠಾಪನೆ

• ಪ್ರಜೋದಯ ವರದಿ

**ಅರಸೀಕೆರೆ :** ಪುರಾಣ ಪ್ರಸಿದ್ಧ ಮಾಡಾಳು ಮೂಲಸ್ಥಾನ ಸ್ವರ್ಣ ಗೌರಮ್ಮನವರ ಪ್ರತಿಷ್ಠಾಪನೆ ಹಾಗು 166ನೇ ವರ್ಷದ ಜಾತ್ರಾ ಮಹೋತ್ಸವ ಮಂಗಳವಾರ ಪ್ರಾರಂಭ ಗೊಳ್ಳಲಿದೆ.

ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ಆ.26ರಂದು ಬೆಳಿಗ್ಗೆ 11.30ಕ್ಕೆ ಕೋಡಿಮಠ ಪೀಠಾಧ್ಯಕ್ಷ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಇಷ್ಟಲಿಂಗ ಪೂಜೆ ನೆರವೇರಿಸಿ, ಮೂಲ ಸ್ವರ್ಣ ಗೌರಮ್ಮನವರಿಗೆ ಚಿನ್ನದ ಮೂಗುತಿ ಧಾರಣೆ ಮಾಡುವುದರೊಂದಿಗೆ ಜಾತ್ರೆಗೆ ಅಧಿಕೃತ ಚಾಲನೆ ನೀಡಲಿದ್ದಾರೆ. ನಂತರ ನೂತನ ದೇವಾಲಯಕ್ಕೆ ಮೆರವಣಿಗೆ ಮೂಲಕ ಕರೆ ತಂದು, ಅಶ್ವಾರೂಢ ಪುಷ್ಪಾಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಲಾಗುವುದು. ಪ್ರತಿದಿನವೂ ಸಂಪ್ರದಾಯದಂತೆ ತ್ರಿಕಾಲ ಪೂಜೆ ಹಾಗು ಸಂಜೆ 7 ಗಂಟೆಗೆ ಭಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲಾಗಿದೆ.

ಮಾಡಾಳು ಗ್ರಾಮದ ಶ್ರೀ ಗುರು ಶಿವಬಸವ ಕುಮಾರಾಶ್ರಮ ರಸ್ತೆ ದೇವಾಲಯದಲ್ಲಿ ಜಾತ್ರಾ ಮಹೋತ್ಸವವು ಆಗಸ್ಟ್ 26ರಿಂದ ಸೆಪ್ಟೆಂಬರ್ 6ರವರೆಗೆ ಒಟ್ಟು 12 ದಿನಗಳ ಕಾಲ ನಡೆಯಲಿದೆ. ಸೆ.6 ರಂದು ಸಂಜೆ ದೇವಿಯ ವಿಸರ್ಜನೆಯೊಂದಿಗೆ ಧಾರ್ಮಿಕ ಕಾರ್ಯಕ್ರಮ ಗಳಿಗೆ ತೆರೆ ಬೀಳಲಿದೆ. ಸೆ.4 ರಂದು ರಾತ್ರಿ ಸ್ವಾಮೀಜಿಯ ಪಾದಪೂಜೆ, ಮಂಗಳಾರತಿ, ಸೆ.5ರಂದು ಮುಂಜಾನೆ ಚಂದ್ರಮಂಡಲೋತ್ಸವ ನಡೆಯಲಿದೆ.



ಪ್ರತಿದಿನ ನಡೆಯುವ ಪೂಜಾ ಕೈಂಕರ್ಯಗಳಲ್ಲಿ ಭಕ್ತಾದಿಗಳು ಭಾಗವಹಿಸಿ ದೇವಿಯ ದರ್ಶನ ಪಡೆಯಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ.

## ಹಿಂದೂ ಶ್ರದ್ಧಾ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ : ಶಾಸಕ ಸಿ.ಕೆ.ರಾಮಮೂರ್ತಿ ಆರೋಪ

# ಸಿಎಂ ಎಡಪಂಥೀಯರೊಂದಿಗೆ ಸೇರಿ ಅಪಪ್ರಚಾರ

• ಪ್ರಜೋದಯ ವರದಿ

**ಹಾಸನ:** ಹಿಂದೂಗಳ ಶ್ರದ್ಧಾ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಎಡಪಂಥೀಯರು ಮಾಡಿದ್ದಾರೆ. ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿಕೊಂಡಿದ್ದಾರೆಂದು ಜಯನಗರ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಅವರು ಆರೋಪಿಸಿದರು.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆಂದು ಆರೋಪಿಸಿ ಬೆಂಗಳೂರು ಜಯನಗರ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ನೇತೃತ್ವದಲ್ಲಿ ಧರ್ಮಸ್ಥಳ ಚಲೋ ರ್‍ಯಾಲಿ ಹಾಸನ ಮಾರ್ಗವಾಗಿ ಧರ್ಮಸ್ಥಳಕ್ಕೆ ತೆರಳಿತು. ಮಾರ್ಗಮಧ್ಯೆ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಜೊತೆ ಬಿ ಟೀಂ ಇದೆ. ದಿನೇಶ್ ಅಮಿನ್‌ಮಟ್ಟು, ದ್ವಾರಕನಾಥ್ ಇವರ ಜೊತೆ ಸೇರಿಕೊಂಡಿದ್ದಾರೆ. ಇವರೆಲ್ಲಾ ನಗರ ನಕ್ಸಲೈಟ್ಸ್‌ಗಳು, ಈ ಹಿಂದೆ ನಕ್ಸಲೈಟ್ಸ್‌ಗಳನ್ನು ಸೆರೆಂಡರ್ ಮಾಡಿಸಿದವರು. ಇವರೆಲ್ಲಾ ಒಂದು ತಂಡ ಮಾಡಿಕೊಂಡು ನಮ್ಮ ಶ್ರದ್ಧ ಕೇಂದ್ರಕ್ಕೆ ಮಾಡುತ್ತಿರುವ ದೊಡ್ಡ ಅವಮಾನವಾಗಿದ್ದು, ಇದರ ವಿರುದ್ಧ ನಾವೆಲ್ಲಾ ಪ್ರತಿಭಟನೆ ಮಾಡುತ್ತೇವೆ. ಎಲ್ಲಾ ಹಿಂದೂಗಳು ಎದ್ದು ಹೋರಾಟ ಮಾಡಬೇಕೆಂದು ಕರೆ ನೀಡಿದರು.



ಸಮೀರ್ ಒಬ್ಬ ಯ್ಯೂಟೂಬರ್, ಎಸ್‌ಐಐ ಮೂಲಕ ಒಳಸಂಚು ಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರ ಮೊದಲು ತನಿಖೆ ಮಾಡಬೇಕಿತ್ತು. ಇದರ ಹಿಂದೆ ಇರುವ ಎಲ್ಲರನ್ನೂ ಬಂಧನ ಮಾಡಬೇಕು. ಚಿನ್ನಯ್ಯನಿಗೆ ಎಲ್ಲವೂ ಗೊತ್ತಿದೆ, ಬುರುಡೆಯೂ ಗೊತ್ತಿದೆ. ಈ ಹಿಂದೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಯಾಗಿದ್ದ ಶಶಿಕಾಂತ್ ಸಿಂಥೆಲ್ ಅವರನ್ನು ಬಂಧಿಸಬೇಕು. ಇವರು ಎಡಪಂಥೀಯರ ಜೊತೆ ಸೇರಿಕೊಂಡು ಪ್ಲ್ಯಾನ್ ಮಾಡಿದ್ದಾರೆ. ಕೆಲವೇ ಕೆಲವು ವ್ಯಕ್ತಿಗಳು, ಯ್ಯೂಟ್ಯೂಬರ್‌ಗಳು ಮಾಡುತ್ತಿರುವುದು ಸರಿಯಲ್ಲ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಷಡ್ಯಂತ್ರ ನಡೆದಿದೆ ಎಂದು ಸರಿಯಾಗಿ ಹೇಳಿದ್ದಾರೆ. ಮುಖ್ಯಮಂತ್ರಿ ಎಸ್‌ಐಟಿ ತನಿಖೆಗೆ ಕೊಟ್ಟ ಮೇಲೆ, ಎಸ್‌ಐಟಿ ಅವರು ಏನು ಮಾಡಬೇಕಿತ್ತು. ಗಿರೀಶ್ ಮಟ್ಟಣ್ಣನವರಿಗೆ ಏನು ಕೆಲಸ, ಮಹೇಶ್ ತಿಮ್ಮರೋಡಿ ಹಿಂದೆ ಯಾರು ಇದ್ದಾರೆ. ಅನನ್ಯಭಟ್ ನಿಜನೋ, ಸುಳ್ಳೋ ಎಂಬುದನ್ನು ಮೊದಲು ಸಮಗ್ರವಾಗಿ ತನಿಖೆ ಮಾಡಬೇಕಿತ್ತು ಎಂದರು.

ಬೆಂಗಳೂರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಅನ್ಯಕೋಮಿನವರ ಬಗ್ಗೆ ಮೆಸೇಜ್ ಮಾಡಿದ್ದಕ್ಕೆ ಪೊಲೀಸ್ ಠಾಣೆಗೆ ಬೆಂಕಿ

» ಮೂರನೇ ಪುಟದಲ್ಲಿ

# ಕಾಲು ಜಾರಿ ಹೊಳೆಗೆ ಬಿದ್ದು ವ್ಯಕ್ತಿ ಸಾವು



• ಪ್ರಜೋದಯ ವರದಿ

**ಹೆತ್ತೂರು :** ಕಾಲಸಂಕ ದಾಟುವಾಗ ಕಾಲು ಜಾರಿ ಕರಗೂರು ಕೊಪ್ಪಲು ಹೊಳೆಗೆ ಬಿದ್ದು ರೈತರೊಬ್ಬರು ಕೊಚ್ಚಿ ಕೊಂಡು ಹೋಗಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಯಸಳೂರು ಹೋಬಳಿಯ ಉಚ್ಚಂಗಿ ಕರಗೂರು ಗ್ರಾಮದ ಪ್ರಕಾಶ (65) ಎಂಬುವವರು ನಾಪತ್ತೆಯಾಗಿದ್ದಾರೆ. ಜಮೀನಿನಲ್ಲಿ ದನಗಳನ್ನು ಕಟ್ಟಲು ಹೋದಾಗ ಕಾಲು ಜಾರಿ ನದಿಯಲ್ಲಿ ಬಿದ್ದು ಕೊಚ್ಚಿಕೊಂಡು ಸಾವನ್ನಪ್ಪಿದ್ದಾರೆ ಹೋಗಿದ್ದಾರೆ ಎನ್ನಲಾಗಿದೆ. ಕತ್ತಲಾದರೂ ಪ್ರಕಾಶ ಮನೆಗೆ ಬಾರದ ಕಾರಣ ಅವರ ಪತ್ನಿ ರುಕ್ಮಿಣಿ ಹಾಗು ಗ್ರಾಮಸ್ಥರು ಹುಡುಕಾಟ ನಡೆಸಿದರು.

ಸೋಮವಾರ ಬೆಳಿಗ್ಗೆ ಅಗ್ನಿಶಾಮಕ ಸಿಬ್ಬಂದಿ ಶವ ಹುಡುಕಿದರೂ ಪತ್ತೆಯಾಗಿಲ್ಲ. ಕಾರ್ಯಾಚರಣೆಯನ್ನು ಮಂಗಳವಾರ ಸಹ ಮುಂದುವರಿಸಲಾಗುವುದು.

CMYK CMYK CMYK CMYK

# ಹಬ್ಬಗಳು ನಮ್ಮ ಬದುಕಿನಿಂದ ಇನ್ನೂ ದೂರ ಸರಿದಿಲ್ಲ

ಸಿದ್ಧಿ ಬುದ್ಧಿಗಳಿಗೆ ಒಡೆಯನಾದ ಗಣೇಶ ಕೇಳಿದ ವರಗಳನ್ನು ನೀಡುವ ದೇವರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿಯೂ ಗಣೇಶನ ವಿಗ್ರಹವನ್ನು ಕೂರಿಸಿ ವಿಶೇಷವಾಗಿ ಹಬ್ಬ ಆಚರಿಸುತ್ತಾರೆ. ಕೊನೆಗೆ ಗಣೇಶನನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ. ಗಣೇಶನ ಉತ್ಸವವನ್ನು ದೇಶದ ಎಲ್ಲಾ ಕಡೆ ವಿಜೃಂಭಣೆಯಿಂದ ಆಚರಿಸುತ್ತಾರೆ. ಭಾದ್ರಪದ ಶುಕ್ಲಪಕ್ಷದ ತದಿಗೆಯಂದು ತೊಡಗಿ 16 ವರ್ಷಗಳಲ್ಲಿ ಗೌರೀವ್ರತವನ್ನು ಷೋಡಶೋಪಚಾರ ಪೂಜೆಗಳಿಂದ ಪಾರ್ವತಿಯನ್ನು ಪೂಜಿಸಿದರೆ ಸೌಭಾಗ್ಯಗಳು ಹೇಗೆ ಲಭಿಸುವುದೊ ಚತುರ್ಥಿಯಲ್ಲಿ ಗಣಪತಿಯನ್ನು ಪೂಜಿಸಿದರೆ ವಿಘ್ನಪರಿಹಾರಗಳೂ, ಸಂತತಿ-ಸಂಪತ್ತುಗಳು ಲಭಿಸುವವು. ಕುಷ್ಠವ್ಯಾಧಿಗಳಂತಹ ಭೀಕರ ಆರೋಗ್ಯ ಸಮಸ್ಯೆಗಳು ನಾಶವಾಗುವುದು.

ಏಕದಂತಂ ಮಹಾಕಾಯಂ
ಲಂಬೋದರಂ ಗಜಾನನಂ
ವಿಘ್ನ ನಾಶಕರ್ಮ ದೇವಂ
ಹೇರಂಭಂ ಪ್ರಣಮಾಮ್ಯಹಂ

ಭಾರತದ ಪರಂಪರೆ ಬಹಳ ವಿಶಿಷ್ಟ ಹಾಗೂ ಅಪರೂಪವಾದದ್ದು. ಭಾರತೀಯರ ಸಾಂಸ್ಕೃತಿಕ ನೆಲೆಗಟ್ಟು ಬಹಳ ಪವಿತ್ರವಾದುದು. ನಮ್ಮಲ್ಲಿ ಸಂಬಂಧ, ಬಾಂಧವ್ಯಗಳಿಗೆ ಹೆಚ್ಚು ಬೆಲೆ ಕೊಡುತ್ತೇವೆ. ಹೀಗಾಗಿ ಪ್ರತಿಯೊಂದು ಸಂದರ್ಭಗಳನ್ನು ಹಬ್ಬಗಳಲ್ಲಿ ಕಾಣುವರು.

ಭಾರತೀಯರು ಸಂಪ್ರದಾಯದ ಪರಂಪರೆಯ ಮೇಲೆ ಅಪಾರ ಅಭಿಮಾನ ಉಳ್ಳವರು. ನಮಗೆ ಹಬ್ಬಗಳ ಮೇಲೆ ಅತ್ಯಂತ ವ್ಯಾಮೋಹ ಏಕೆಂದರೆ ನೆಮ್ಮದಿಯ, ಪ್ರೀತಿಯ ಬದುಕು ಕಣ್ಣ ಮುಂದೆ ಹಾದು ಹೋಗುವುದು. ಬಹುಶಃ ಇಂದಿನ ದಿನಗಳಲ್ಲಿ ಅಂತಹ ಒಗ್ಗಟ್ಟು ಕಾಣದೇ ಹೋದರೂ ಕೂಡ ಹಬ್ಬಗಳು ನಮ್ಮ ಬದುಕಿನಿಂದ ಇನ್ನೂ ದೂರ ಸರಿದಿಲ್ಲ.

ಭಾರತೀಯ ಪರಂಪರೆಯಲ್ಲಿ ಪ್ರತಿಯೊಂದು ಹಬ್ಬದ ಹಿಂದೆಯೂ ಒಂದು ಸಕಾರಾತ್ಮಕ ಯೋಚನೆ ಅಡಗಿದೆ. ದುಷ್ಟಶಿಕ್ಷಣ, ಶಿಷ್ಟರಕ್ಷಣ ಎಂಬ ನಾಣ್ನುಡಿ ನಿಜವಾಗಿದೆ. ಜಗನ್ನಾಥದಾಸರು ಫಲವಿದು ಬಾಳ್ದುದಕೆ ಮತ್ತು ಹರಿಕಥಾಮೃತಸಾರದಲ್ಲಿ ಕಠಿಣ ಕಲಿಯುಗದಲ್ಲಿ ಅನುಸಂಧಾನವೇ ಪುಣ್ಯ ಗಳಿಕೆಯ ಸುಲಭ, ಸರಳ ಮಾರ್ಗವೆಂದು ತಿಳಿಸಿದ್ದಾರೆ.

ಹಾಗಾಗಿಯೇ ಹಬ್ಬಗಳ ಆಚರಣೆ ಮಾಡುವುದು ಅಗತ್ಯವಾಗಿದೆ. ಇದರಲ್ಲಿ ಒಂದು ಹಬ್ಬವೇ ಗೌರಿ ಗಣೇಶ ಹಬ್ಬ. ತುಂಬಾ ಅದ್ದೂರಿಯಾಗಿ ಅದರ ಆಚರಣೆ ಕಣ್ತುಂಬುವಂತೆ ಮಾಡುತ್ತದೆ.

ಗೌರಿ ಗಣೇಶ ಹಬ್ಬಗಳು ಜೊತೆಯಾಗಿ ಬರುತ್ತವೆ. ಒಮ್ಮೊಮ್ಮೆ ಗೌರಿ ಹಬ್ಬ ಒಂದು ದಿನ ಮೊದಲು ಬರುತ್ತದೆ. ವಿವಾಹಿತ ಮಹಿಳೆಯರಿಗೆ ತವರು ಮನೆಯಿಂದ ಉಡುಗೊರೆ ಹಾಗೂ ಬಾಗಿನ ಕೊಡುವ ಸಂಪ್ರದಾಯವಿದೆ.

ಮನೆಗಳಲ್ಲಿ ಗೌರಿ ವಿಗ್ರಹವನ್ನು ವಿಶೇಷವಾಗಿ ಅಲಂಕರಿಸಿ ಪೂಜಿಸುತ್ತಾರೆ. ಮನೆಗಳನ್ನು ತಳಿರು ತೋರಣಗಳಿಂದ ಅಲಂಕರಿಸುತ್ತಾರೆ. ಗಿಣಿ ಹಸಿರು ಬಣ್ಣದ ಸೀರೆ ಅದೇ ಬಣ್ಣದ ಹಸಿರು ರವಿಕೆ ಬಟ್ಟೆಯನ್ನು ಗೌರಿ ದೇವತೆಗೆ ಹೊದಿಸಿ ನಂತರ ಅದನ್ನು ಮುತ್ತೈದೆಗೆ ಬಾಗಿನ ಕೊಡುತ್ತಾರೆ.

ಗೌರಿ ಹಬ್ಬವನ್ನು ಸ್ವರ್ಣಗೌರಿ ಹಬ್ಬವೆಂದೂ ಕೂಡ ಕರೆಯುತ್ತಾರೆ. ಕೈಗೆ ಅರಿಶಿನ ದಾರ, ಸೇವಂತಿಗೆ ಹೂ ಗೌರಿ ಹಬ್ಬಕ್ಕೆ ಶ್ರೇಷ್ಠ. ಗೌರಿ ಹಬ್ಬವನ್ನು ಆಚರಿಸುವುದರಿಂದ ಸಮಸ್ತ ಸಂಪತ್ತು

### ಹಿರಿಯರೂ ಚಿಕ್ಕವರೂ, ವೃದ್ದರು ಎಲ್ಲರೂ ಆಸಕ್ತಿಯಿಂದ ಕಾಯುತ್ತಿರುತ್ತಾರೆ...

- ಗಣೇಶನ ಹಬ್ಬಕ್ಕೆ ಸಣ್ಣ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಕಾತುರದಿಂದ ಕಾಯುತ್ತಿರುತ್ತಾರೆ.
- ಪಾರ್ವತಿ ಪುತ್ರನಾದ ಗಣಪ ಪರಶಿವನಿಂದ ಹತನಾಗುವುದು, ಅನಂತರ ಆನೆಯ ತಲೆ ಜೋಡಿಸಿ ಬದುಕುವುದು.
- ಕಡುಬು, ಮೋದಕ, ಪಾಯಸವನ್ನು ಹೊಟ್ಟೆ ಪೂರ್ತಿ ಉಂಡು ಗಣಪನ ವಾಹನವಾದ ಇಲಿಯ ಮೇಲೆ ಸತ್ತುವುದನ್ನು ನೋಡಿದ ಚಂದ್ರ ಶಾಪಗ್ರಸ್ತನಾಗುವುದು.
- ಈ ರೀತಿ ಗಣೇಶನ ಜೀವನೇತಿಹಾಸ ನವಿರಾದ ಹಾಸ್ಯದಿಂದ ತುಂಬಿದೆ.
- ಸಿದ್ಧಿ ಬುದ್ಧಿಗಳಿಗೆ ಒಡೆಯನಾದ ಗಣೇಶ ಕೇಳಿದ ವರಗಳನ್ನು ನೀಡುವ ದೇವರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿಯೂ ಗಣೇಶನ ವಿಗ್ರಹವನ್ನು ಕೂರಿಸಿ ವಿಶೇಷವಾಗಿ ಹಬ್ಬ ಆಚರಿಸುತ್ತಾರೆ.
- ಕೊನೆಗೆ ಗಣೇಶನನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ. ಗಣೇಶನ ಉತ್ಸವವನ್ನು ದೇಶದ ಎಲ್ಲಾ ಕಡೆ ವಿಜೃಂಭಣೆಯಿಂದ ಆಚರಿಸುತ್ತಾರೆ.
- ಭಾದ್ರಪದ ಶುಕ್ಲಪಕ್ಷದ ತದಿಗೆಯಂದು ತೊಡಗಿ 16 ವರ್ಷಗಳಲ್ಲಿ ಗೌರೀವ್ರತವನ್ನು ಷೋಡಶೋಪಚಾರ ಪೂಜೆಗಳಿಂದ ಪಾರ್ವತಿಯನ್ನು ಪೂಜಿಸಿದರೆ ಸೌಭಾಗ್ಯಗಳು ಹೇಗೆ ಲಭಿಸುವುದೊ ಚತುರ್ಥಿಯಲ್ಲಿ ಗಣಪತಿಯನ್ನು ಪೂಜಿಸಿದರೆ ವಿಘ್ನಪರಿಹಾರಗಳೂ, ಸಂತತಿ-ಸಂಪತ್ತುಗಳು ಲಭಿಸುವವು.
- ಕುಷ್ಠವ್ಯಾಧಿಗಳಂತಹ ಭೀಕರ ಆರೋಗ್ಯ ಸಮಸ್ಯೆಗಳು ನಾಶವಾಗುವುದು.
- ಮನಸ್ಸಿನಲ್ಲಿ ಆಲೋಚಿಸಿದ ಕಾರ್ಯಗಳೆಲ್ಲವೂ ಕೈಗೂಡುವವು.



ಬರುವುದು. ಶತ್ರುಗಳನ್ನು ಜಯಿಸುವರು. ನಿರ್ದೋಷವಾದ ಉತ್ತಮ ಪದವಿಯನ್ನು ಬೇಗನೆ ಹೊಂದುವರು. ಮಕ್ಕಳನ್ನು ಬಯಸುವವರು ಮಕ್ಕಳನ್ನು ಪಡೆಯುವರು. ವಿದ್ಯೆಯನ್ನು ಅಪೇಕ್ಷಿಸುವವರು ವಿದ್ಯೆಯನ್ನೂ, ಮೋಕ್ಷವನ್ನು ಬಯಸುವವರು ಮೋಕ್ಷವನ್ನು ಪಡೆಯುವರು. ಸ್ವರ್ಣಗೌರಿಯ ಪ್ರಸಾದದಿಂದ ಸರ್ವಕಾರ್ಯಗಳೂ ಸಿದ್ಧಿಸುವವು.

ಗಣೇಶನ ಹಬ್ಬಕ್ಕೆ ಸಣ್ಣ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಕಾತುರದಿಂದ ಕಾಯುತ್ತಿರುತ್ತಾರೆ. ಪಾರ್ವತಿ ಪುತ್ರನಾದ ಗಣಪ ಪರಶಿವನಿಂದ ಹತನಾಗುವುದು, ಅನಂತರ ಆನೆಯ ತಲೆ ಜೋಡಿಸಿ ಬದುಕುವುದು.

ಕಡುಬು, ಮೋದಕ, ಪಾಯಸವನ್ನು ಹೊಟ್ಟೆ ಪೂರ್ತಿ ಉಂಡು ಗಣಪನ ವಾಹನವಾದ ಇಲಿಯ ಮೇಲೆ ಸತ್ತುವುದನ್ನು ನೋಡಿದ ಚಂದ್ರ ಶಾಪಗ್ರಸ್ತನಾಗುವುದು. ಈ ರೀತಿ ಗಣೇಶನ ಜೀವನೇತಿಹಾಸ ನವಿರಾದ ಹಾಸ್ಯದಿಂದ ತುಂಬಿದೆ.

ಸಿದ್ಧಿ ಬುದ್ಧಿಗಳಿಗೆ ಒಡೆಯನಾದ ಗಣೇಶ ಕೇಳಿದ ವರಗಳನ್ನು ನೀಡುವ ದೇವರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿಯೂ ಗಣೇಶನ ವಿಗ್ರಹವನ್ನು ಕೂರಿಸಿ ವಿಶೇಷವಾಗಿ ಹಬ್ಬ ಆಚರಿಸುತ್ತಾರೆ. ಕೊನೆಗೆ ಗಣೇಶನನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ. ಗಣೇಶನ ಉತ್ಸವವನ್ನು ದೇಶದ ಎಲ್ಲಾ ಕಡೆ ವಿಜೃಂಭಣೆಯಿಂದ ಆಚರಿಸುತ್ತಾರೆ.

ಭಾದ್ರಪದ ಶುಕ್ಲಪಕ್ಷದ ತದಿಗೆಯಂದು ತೊಡಗಿ 16 ವರ್ಷಗಳಲ್ಲಿ ಗೌರೀವ್ರತವನ್ನು ಷೋಡಶೋಪಚಾರ ಪೂಜೆಗಳಿಂದ ಪಾರ್ವತಿಯನ್ನು ಪೂಜಿಸಿದರೆ ಸೌಭಾಗ್ಯಗಳು ಹೇಗೆ ಲಭಿಸುವುದೊ ಚತುರ್ಥಿಯಲ್ಲಿ ಗಣಪತಿಯನ್ನು ಪೂಜಿಸಿದರೆ ವಿಘ್ನಪರಿಹಾರಗಳೂ, ಸಂತತಿ-ಸಂಪತ್ತುಗಳು ಲಭಿಸುವವು.

ಕುಷ್ಠವ್ಯಾಧಿಗಳಂತಹ ಭೀಕರ ಆರೋಗ್ಯ ಸಮಸ್ಯೆಗಳು ನಾಶವಾಗುವುದು. ಮನಸ್ಸಿನಲ್ಲಿ ಆಲೋಚಿಸಿದ ಕಾರ್ಯಗಳೆಲ್ಲವೂ ಕೈಗೂಡುವವು.

ಹೀಗೆ ಇಷ್ಟ ಸಿದ್ಧಿಯನ್ನು ಕೊಡುವ ಕಾರಣದಿಂದಲೇ ಗಣಪತಿಯು ಸಿದ್ಧಿ ವಿನಾಯಕನೆಂದು ಪ್ರಸಿದ್ಧನಾದನು. ಗಣಪತಿಯನ್ನು ಪೂಜಿಸಿದರೆ ವಿಷ್ಣುವೂ, ರುದ್ರನೂ, ಸೂರ್ಯನೂ, ಪಾರ್ವತಿಯೂ, ಅಗ್ನಿಯೇ ಮೊದಲಾದ ದೇವತೆಗಳೂ ಸಂತುಷ್ಟರಾಗುವರು. ಮಾತೃದೇವತೆಗಳೂ ಕೂಡ ಸಂತುಷ್ಟರಾಗುವರು. ಕಲಿಯುಗ ದಲ್ಲಿ ಆಯುಷ್ಯ ಕಡಿಮೆಯಾಗಿದೆ. ಸಾಧನೆಗೆ ವಿಘ್ನಗಳು ಹೆಚ್ಚು. ಸಾಧನೆಯು ಮರುಭೂಮಿಯಲ್ಲಿನ ಮರೀಚಿಕೆಯಂತೆ ಆಗಿದೆ. ದಾಸರೂ, ಅಪರೋಕ್ಷ ಜ್ಞಾನಿಗಳು, ಯತಿವರೇಣ್ಯರು ಕರ್ಮಗಳನ್ನು ಹೇಗೆ ಅನುಸಂಧಾನ ಪೂರ್ವಕವಾಗಿ ಅರ್ಪಿಸಬೇಕೆಬುದನ್ನು ತಿಳಿಸಿಕೊಟ್ಟು ಮಹದುಪಕಾರ ಮಾಡಿದ್ದಾರೆ. ಕೇವಲ ದೇವರ ನಾಮಸ್ಮರಣೆಯಿಂದ ಕಲಿಯುಗದಲ್ಲಿ ಸಾಧನೆ ಸಾಧ್ಯ ಎಂದು ತೋರಿಸಿ ಕೊಟ್ಟಿದ್ದಾರೆ.

**ನಾವೇಕೆ ಗೌರಿ ಹಬ್ಬವನ್ನು ಆಚರಿಸಬೇಕು..? ನಿಮ್ಮ ಪೂಜೆ ಹೀಗಿರಲಿ..!**

ಭಾದ್ರಪದ ಮಾಸದಲ್ಲಿ ಗಣೇಶನನ್ನು ಮನೆಗೆ ಆಹ್ವಾನಿಸುವ ಒಂದು ದಿನದ ಮೊದಲು ಆತನ ತಾಯಿ ಗೌರಿಯನ್ನು ಮನೆಗೆ ಆಹ್ವಾನಿಸಲಾಗುತ್ತದೆ. ಇದನ್ನು ಗೌರಿ ಹಬ್ಬ ಅಥವಾ ಸ್ವರ್ಣ ಗೌರಿ ಹಬ್ಬವೆಂದು ಕರೆಯಲಾಗುತ್ತದೆ. ಈ ಬಾರಿ ಗೌರಿ ಹಬ್ಬವನ್ನು ಆಗಸ್ಟ್ 26 ರಂದು ಆಚರಿಸಲಾಗುತ್ತದೆ. ಗೌರಿ ಹಬ್ಬವನ್ನು ನಾವೇಕೆ ಆಚರಿಸಬೇಕು..? ಗೌರಿ ಹಬ್ಬದಂದು ಪೂಜೆ ಮಾಡುವುದು ಹೇಗೆ..?

ಶ್ರಾವಣ ಮಾಸದಲ್ಲಿ ಶನಿ ಅಥವಾ ಕುಶೋತ್ಪತ್ತಿನಿ ಅಮಾವಾಸ್ಯೆಯ ನಂತರ, ಶುಕ್ಲ ಪಕ್ಷದ ಮೂರನೇ ದಿನದಂದು ಸ್ವರ್ಣ ಗೌರಿ ಅಥವಾ ಗೌರಿ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬವನ್ನು ವಿವಾಹಿತ ಮಹಿಳೆಯರು ಹಾಗೂ ಅವಿವಾಹಿತ ಮಹಿಳೆಯರು ಆಚರಿಸಬಹುದು ಅಥವಾ ಉಪವಾಸ ಮಾಡಬಹುದು.

**1. ಗೌರಿ ಹಬ್ಬವನ್ನು ಏಕೆ ಆಚರಿಸಬೇಕು..?:** ಪಾರ್ವತಿ ದೇವಿಯು ಕಠಿಣ ತಪಸ್ಸು ಮಾಡುವ ಮೂಲಕ ಶಿವನನ್ನು ಮನವೊಲಿಸಿದಳು ಮತ್ತು ನಂತರ ಗೌರಿ ಹಬ್ಬದ ದಿನದಂದು, ತನ್ನನ್ನು ನಿಮ್ಮ ಪತ್ನಿಯಾಗಿ ಸ್ವೀಕರಿಸಬೇಕೆನ್ನುವ ವರವನ್ನು ಶಿವನಿಂದ ಪಡೆದುಕೊಂಡಳು. ಅದಕ್ಕಾಗಿಯೇ ಈ ದಿನ ಉಪವಾಸ ವ್ರತವನ್ನು ಆಚರಿಸಲಾಗುತ್ತದೆ.

**2. ಉಪವಾಸದ ಉದ್ದೇಶ:** ಗೌರಿ ಹಬ್ಬದ ದಿನದಂದು, ವಿವಾಹಿತ ಮಹಿಳೆಯರು ತಮ್ಮ ಗಂಡನ ದೀರ್ಘಾಯುಷ್ಯಕ್ಕಾಗಿ ಉಪವಾಸವನ್ನು ಆಚರಿಸುತ್ತಾರೆ. ಆದರೆ ಅವಿವಾಹಿತ ಹುಡುಗಿಯರು ಉತ್ತಮ ಪತಿಯನ್ನು ಪಡೆಯುವುದಕ್ಕಾಗಿ ವ್ರತವನ್ನು ಆಚರಿಸುತ್ತಾರೆ. ಗೌರಿ ಹಬ್ಬದ ದಿನದಂದು, ಅನೇಕ ಸ್ಥಳಗಳಲ್ಲಿ ಜಾತ್ರೆಗಳನ್ನು ಆಯೋಜಿಸಲಾಗುತ್ತದೆ ಮತ್ತು ಪಾರ್ವತಿ ದೇವಿಯ ಮೆರವಣಿಗೆಯನ್ನು ಬಹಳ ವಿಜೃಂಭಣೆಯಿಂದ ಹೊರತರಲಾಗುತ್ತದೆ.

**3. ಅವಿವಾಹಿತ ಹೆಣ್ಣುಮಕ್ಕಳೂ ಉಪವಾಸ ಇರುತ್ತಾರೆ:** ಮದುವೆಯಾಗದ ಹೆಣ್ಣುಮಕ್ಕಳು ಕೂಡ ಬಯಸಿದ ಪತಿಯನ್ನು ಪಡೆಯಲು ಈ ದಿನ ವ್ರತವನ್ನು ಆಚರಿಸಿ ತಾಯಿ ಪಾರ್ವತಿಯನ್ನು ಪೂಜಿಸುತ್ತಾರೆ. ಪಾರ್ವತಿಯ ಆಜ್ಞೆಯಂತೆ ಶಿವನು ಈ ವ್ರತವನ್ನು ಆಚರಿಸುವ ಅವಿವಾಹಿತ ಹುಡುಗಿಯ ದಾಂಪತ್ಯದಲ್ಲಿನ ಅಡೆತಡೆಗಳನ್ನು ತೊಡೆದುಹಾಕುತ್ತಾನೆ ಎಂದು ಆಶೀರ್ವದಿಸಿದನು. ಗೌರಿ ಹಬ್ಬದ ದಿನದಂದು, ಮಹಿಳೆಯರು ಸರಳ ಉಪವಾಸವನ್ನು ಆಚರಿಸುತ್ತಾರೆ. ಗೋರಂಟಿ ಹಚ್ಚಿ, ಅಲಂಕಾರವನ್ನು ಮಾಡಿಕೊಳ್ಳುತ್ತಾರೆ.

**4. ಗೌರಿ ಹಬ್ಬದ ಪೂಜೆ ವಿಧಾನ:**

- ಈ ದಿನ ನಿರ್ಜಲ ವ್ರತವನ್ನು ಇಟ್ಟು ಶಾಸ್ತ್ರೋಕ್ತವಾಗಿ ಪೂಜಿಸುವ ನಿಯಮವಿದೆ. ಈ ಉಪವಾಸವು ಕರ್ವಾ ಚೌತ್‌ಗಿಂತ ಹೆಚ್ಚು ಕಷ್ಟಕರವಾಗಿದೆ ಎಂದು ಹೇಳಲಾಗುತ್ತದೆ.
- ಉಪವಾಸದ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತಾ, ಮಹಿಳೆಯರು ಮಾತೆಯ ಸ್ಥಾನವನ್ನು ಅಲಂಕರಿಸುತ್ತಾರೆ ಮತ್ತು ತಮ್ಮನ್ನು ತಾವು ಅಲಂಕರಿಸಿಕೊಳ್ಳುತ್ತಾರೆ. ಗೌರಿ ಹಬ್ಬದ ದಿನದಂದು, ಮಹಿಳೆಯರು ಬೆಳಿಗ್ಗೆ ಮನೆಗೆಲಸ ಮತ್ತು ಸ್ನಾನದ ನಂತರ ಮೇಕಪ್ ಮಾಡಿಕೊಳ್ಳುವ ಮೂಲಕ ನಿರ್ಜಲ ಉಪವಾಸವನ್ನು ಮಾಡುತ್ತಾರೆ.
- ಸ್ತ್ರೀಯರು ಶಿವ ಮತ್ತು ಪಾರ್ವತಿಯನ್ನು ಷೋಡಶೋಪಚಾರ ಪೂಜೆಯಿಂದ ಅಂದರೆ 16 ವಿಧದ ವಸ್ತುಗಳಿಂದ ಪೂಜಿಸುತ್ತಾರೆ. ಇದರಲ್ಲಿ ಅರಿಶಿನ, ಕುಂಕುಮ, ಮೆಹಂದಿ, ಗಂಧ, ಹೂವು, ನೈವೇದ್ಯ, ಹಾರ, ವೀಳ್ಯದೆಲೆ ಹೀಗೆ ಎಲ್ಲಾ ಪೂಜಾ ಸಾಮಗ್ರಿಗಳನ್ನು ಅರ್ಪಿಸುತ್ತಾರೆ.
- ಪೂಜೆಯ ವಸ್ತುವನ್ನು ಅರ್ಪಿಸಿದ ನಂತರ, ಇಬ್ಬರಿಗೂ ಆರತಿಯನ್ನು ಮಾಡಲಾಗುತ್ತದೆ.
- ನೈವೇದ್ಯವನ್ನು ಅರ್ಪಿಸಿದ ನಂತರ, ಜನರು ಹಾಡನ್ನು ಹಾಡುತ್ತಾರೆ.
- ಈ ದಿನ ಉಪವಾಸದ ಜೊತೆಗೆ ಸಂಜೆಯ ವೇಳೆ ಉಪವಾಸದ ಕಥೆಯನ್ನೂ ಕೇಳಲಾಗುತ್ತದೆ. ಕಥೆಯ ಕೊನೆಯಲ್ಲಿ, ಹೆಂಗಸರು ಗೌರಿಯ ಬಳಿ ತನ್ನ ಗಂಡನ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ಇದರ ನಂತರ, ಮನೆಯಲ್ಲಿ ಹಬ್ಬವನ್ನು ಆಚರಿಸಲಾಗುತ್ತದೆ. ಭಜನೆ ಮತ್ತು ಜಾನಪದ ನೃತ್ಯಗಳನ್ನು ಮಾಡಲಾಗುತ್ತದೆ.
- ಈ ದಿನ, ಮಹಿಳೆಯರು ಇಡೀ ದಿನ ಅನ್ನ ಮತ್ತು ನೀರಿಲ್ಲದೆ ದಿನವನ್ನು ಕಳೆಯುತ್ತಾರೆ ಮತ್ತು ಎರಡನೇ ದಿನ ಸ್ನಾನ ಮತ್ತು ಪೂಜೆಯ ನಂತರ ಅವರು ಉಪವಾಸವನ್ನು ಮುಗಿಸಿದ ನಂತರ ಆಹಾರವನ್ನು ತೆಗೆದುಕೊಳ್ಳುತ್ತಾರೆ.
- ಈ ದಿನದಂದು, ಮೇಕ್‌ಅಪ್ ಮತ್ತು ಸಿಹಿತಿಂಡಿಗಳನ್ನು ತಾಯಿಯ ಮನೆಯಿಂದ ಅವರ ಅತ್ತೆಗೆ ಕಳುಹಿಸಲಾಗುತ್ತದೆ.
- ಈ ದಿನ ಹಸಿರು ಬಟ್ಟೆ, ಹಸಿರು ಚುನರಿ, ಹಸಿರು ಲೆಹೆರಿಯಾ, ಹಸಿರು ಮೇಕಪ್, ಮೆಹಂದಿ ಹಚ್ಚುವುದು, ಉಯ್ಯಾಲೆ ಆಡುವ ಪದ್ಧತಿ ಇದೆ.




ಗೌರಿ ಹಬ್ಬವನ್ನು ಪಾರ್ವತಿ ದೇವಿಯ ಆರಾಧನೆಗೆ ಮೀಸಲಿಡಲಾಗಿದೆ. ಈ ದಿನ ವಿವಾಹಿತ ಮತ್ತು ಅವಿವಾಹಿತ ಮಹಿಳೆಯರು ಶ್ರದ್ಧಾ - ಭಕ್ತಿಯಿಂದ ಪಾರ್ವತಿ ದೇವಿಯನ್ನು ಪೂಜಿಸುತ್ತಾರೆ. ವಿವಾಹಿತ ಮಹಿಳೆಯರು ಗೌರಿ ಹಬ್ಬವನ್ನು ಆಚರಿಸುವುದರಿಂದ ಅವರ ಪತಿಯು ದೀರ್ಘಾಯುಷ್ಯವನ್ನು ಪಡೆದುಕೊಳ್ಳುತ್ತಾರೆ ಮತ್ತು ಅವಿವಾಹಿತ ಮಹಿಳೆಯರು ಗೌರಿ ಹಬ್ಬವನ್ನು ಆಚರಿಸುವುದರಿಂದ ಉತ್ತಮ ವರನನ್ನು ಪಡೆದುಕೊಳ್ಳುತ್ತಾರೆ ಎನ್ನುವ ನಂಬಿಕೆಯಿದೆ.

ಓಂ ತತ್ಸತ್

## 26-8-2025 ದಿನ ಭವಿಷ್ಯ


**ಮೇಷ:** ಸ್ನೇಹಿತರ ಅಥವಾ ಒಬ್ಬ ಪರಿಚಯಸ್ಥರ ಸ್ವಾರ್ಥದ ವರ್ತನೆ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತರಬಹುದು. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ಮನೆಯಲ್ಲಿ ಧರ್ಮಕಾರ್ಯಗಳನ್ನು ನಡೆಸಲಾಗುವುದು.


**ವೃಷಭ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ. ನಿಮ್ಮ ಮಕ್ಕಳು ನಿಮ್ಮ ಉದಾರ ವರ್ತನೆಯ ದುರುಪಯೋಗ ಮಾಡಲು ಬಿಡಬೇಡಿ. ನಿಮ್ಮ ಕಿಟಕಿಯಲ್ಲಿ ಹೂವಿಡುವ ಮೂಲಕ ನಿಮ್ಮ ಪ್ರೀತಿಯನ್ನು ತೋರಿಸಿ. ಪ್ರೀತಿ ಯಾವಾಗಲೂ ಭಾವಪೂರ್ಣವಾಗಿದೆ.


**ಮಿಥುನ:** ನೀವು ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು, ನೀವು ಅವರಿಗೆ ಹಣವನ್ನು ಸಾಲವಾಗಿ ಕೊಡುತ್ತೀರಿ.


**ಕರ್ಕಾಟಕ:** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣವನ್ನು ಗಳಿಸುವಿರಿ. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ.


**ಸಿಂಹ:** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು. ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು.



ಕನ್ಯಾ: ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ. ಇಂದು ಹಣದ ಬಗ್ಗೆ ಕುಟುಂಬ ಸದಸ್ಯರಲ್ಲಿ ಗೊಂದಲ ಉಂಟಾಗಬಹುದು.


ತುಲಾ: ನಿಮ್ಮ ಇತರರನ್ನು ಶ್ಲಾಘಿಸುವ ಮೂಲಕ ಅವರ ಯಶಸ್ಸನ್ನು ಆನಂದಿಸುವ ಸಾಧ್ಯತೆಗಳಿವೆ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತುಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು, ಹಳೆಯ ಹೂಡಿಕೆಯಿಂದ ನೀವು ಪ್ರಯೋಜನವನ್ನು ಪಡೆಯಬಹುದು


**ವೃಶ್ಚಿಕ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಕುಟುಂಬದ ರಹಸ್ಯ ಸುದ್ದಿ ನಿಮಗೆ ಅಚ್ಚರಿ ನೀಡಬಹುದು. ಇಂದು ಪ್ರೇಮ ಜೀವನದ ವಿವಾದಾತ್ಮಕವಾಗಿರಬಹುದು. ನೀವು ಇಂದು ನಿಮ್ಮ ಸಿಹಿಯಾದ ಪ್ರೀತಿಯ ಜೀವನದಲ್ಲಿನ ಉತ್ಕಟತೆಯನ್ನು ಆನಂದಿಸುತ್ತೀರಿ.


**ಧನು:** ಖಿನ್ನತೆಯನ್ನು ಹೊಡೆದೋಡಿಸಿ ಇದು ನಿಮ್ಮನ್ನು ಆವರಿಸಿ ಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ದಿನದ ಆರಂಭವು ಚೆನ್ನಾಗಿ ಅಗಿದರು, ಸಂಜೆಯ ಸಮಯದಲ್ಲಿ ಯಾವುದೇ ಕಾರಣದಿಂದ ನಿಮ್ಮ ಹಣ ಖರ್ಚಾಗಬಹುದು. ಇದರಿಂದ ನೀವು ತೊಂದರೆಗೊಳಗಾಗಬಹುದು. ನಿಮ್ಮಲ್ಲಿ ಕೆಲವು ಆಭರಣ ಅಥವಾ ಗೃಹಬಳಕೆಯ ಸಾಧನಗಳನ್ನು ಖರೀದಿಸುವ ಸಾಧ್ಯತೆಗಳಿವೆ.


**ಮಕರ:** ಸ್ನೇಹಿತರ ಶೀತಲ ವರ್ತನೆ ನಿಮ್ಮ ಮನಸ್ಸಿಗೆ ನೋವು ತರುತ್ತದೆ. ಆದರೆ ಶಾಂತವಾಗಿರಲು ಪ್ರಯತ್ನಿಸಿ. ನಿಮಗೆ ಇದು ಹಿಂದೆ ನೀಡುವ ಬದಲಿಗೆ ದುಃಖವನ್ನು ತಡೆಗಟ್ಟಲು ಪ್ರಯತ್ನಿಸಿ. ಆರ್ಥಿಕ ಸಮಸ್ಯೆ ರಚನಾತ್ಮಕವಾಗಿ ಯೋಚಿಸುವ ನಿಮ್ಮ ಸಾಮರ್ಥ್ಯವನ್ನು ಹಾಳುಮಾಡುತ್ತದೆ. ಇಂದು ನೀವು ಎಂತಹ ಒಳ್ಳೆಯ ಕೆಲಸ ಮಾಡಿದ್ದೀರೆಂದು ತೋರಿಸಲು ನಿಮ್ಮ ಪ್ರೀತಿ ಅರಳುತ್ತದೆ.


**ಕುಂಭ:** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಸಕಾರಾತ್ಮಕವಾಗಿರುವ ಮತ್ತು ಬೆಂಬಲ ನೀಡುವ ಸ್ನೇಹಿತರೊಂದಿಗೆ ಹೊರಗೆ ಹೋಗಿ. ಪ್ರೀತಿಪಾತ್ರರು ಇಂದು ನಿಮ್ಮ ಯಾವುದೇ ಮಾತಿನಿಂದ ಕೋಪಗೊಳ್ಳಬಹುದು.


**ಮೀನ:** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ಸಂಬಂಧಿಗಳು ಬೆಂಬಲ ನೀಡುತ್ತಾರೆ ಮತ್ತು ನಿಮ್ಮ ಮನಸ್ಸಿಗೆ ಆ ಹೊರೆಯಾದ ಆ ತೊಂದರೆಯನ್ನು ಕಡಿಮೆ ಮಾಡುತ್ತಾರೆ. ನಿಮ್ಮನ್ನು ತನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುವ ವ್ಯಕ್ತಿಯನ್ನು ಸಂಧಿಸುತ್ತೀರಿ.

## ಆಗಸ್ಟ್ 26: ಮನೆಗಳಿಲ್ಲದೆ ನಾಯಿ ದಿನ

# ಬೀದಿ ನಾಯಿ: ಹಕ್ಕು ಮತ್ತು ಸಿಕ್ಕು

ದೆಹಲಿಯ ಎಲ್ಲಾ ಬೀದಿ ನಾಯಿಗಳನ್ನು ಕಡ್ಡಾಯವಾಗಿ ಶಾಶ್ವತ ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ್ದ ಆದೇಶ ದೇಶದಾದ್ಯಂತ ಪರ, ವಿರೋಧದ ಚರ್ಚೆಗೆ ಕಾರಣವಾಗಿತ್ತು. ಮುಕ್ತವಾಗಿ ಓಡಾಡಿಕೊಂಡಿರುವ ಪ್ರಾಣಿಗಳನ್ನು ಇಕ್ಕಟ್ಟಾದ ಜಾಗದಲ್ಲಿ ಬಂಧಿಸುವುದು ಇಲ್ಲವೇ ಅವುಗಳ ವಾಸಸ್ಥಳದಿಂದ ಎತ್ತಂಗಡಿ ಮಾಡಿ ಬೇರೆಡೆ ಕೂಡಿಹಾಕುವುದು ಪ್ರಾಣಿ ಜನನ ನಿಯಂತ್ರಣ ನಿಯಮ2023ರ ಸ್ಪಷ್ಟ ಉಲ್ಲಂಘನೆ ಎಂದು ಕೆಲವರು ವಾದಿಸಿದ್ದರು. ಮಕ್ಕಳು, ವೃದ್ಧರನ್ನು ನಾಯಿಗಳು ಕಚ್ಚಿ ಸಾಯಿಸುತ್ತಿರುವ, ಗಂಭೀರವಾಗಿ ಗಾಯಗೊಳಿಸುತ್ತಿರುವ ಹೃದಯವಿದ್ರಾವಕ ದೃಶ್ಯಗಳು ಜಾಲತಾಣಗಳಲ್ಲಿ ಹರಿದಾಡುತ್ತಾ, ಇನ್ನೆಷ್ಟು ದಿನ ಈ ಕ್ರೌರ್ಯ ಸಹಿಸುವುದು? ಎಂಬ ಧ್ವನಿಯೂ ಜೋರಾಗಿ ಕೇಳಿಬಂದಿತ್ತು.

ಸಾರ್ವಜನಿಕ ಚರ್ಚೆಗಳ ತರುವಾಯ, ಸುಪ್ರೀಂ ಕೋರ್ಟ್ ತನ್ನ ಆದೇಶವನ್ನು ಪರಿಷ್ಕರಿಸಿದೆ. ದೆಹಲಿಯಲ್ಲಿ ಈಗಾಗಲೇ ಹಿಡಿಯಲಾಗಿರುವ ಬೀದಿ ನಾಯಿಗಳಿಗೆ ಲಸಿಕೆ ಹಾಕಿ, ಅವುಗಳನ್ನು ಈ ಮುಂಚೆ ಇದ್ದ ಸ್ಥಳಗಳಿಗೇ ಬಿಡಲು ಹಾಗೂ ಅವುಗಳಿಗೆ;ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಬೇಕೆಂದು ಹೇಳಿದೆ. ರೇಬಿಸ್ ಸೋಂಕು ಇರುವ ಅಥವಾ ಸೋಂಕಿನ ಶಂಕೆ ಇರುವ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಬೇಕು ಹಾಗೂ ಯಾವುದೇ ಕಾರಣಕ್ಕೂ ಅವುಗಳನ್ನು ಮತ್ತೆ ಬೀದಿಗಳಿಗೆ ಬಿಡಬಾರದು ಎಂದೂ ಹೇಳಿದೆ. ಬೀದಿ ನಾಯಿಗಳ ಉಪದ್ರವಕ್ಕೆ ಕಡಿವಾಣ ಹಾಕುವುದಕ್ಕಾಗಿ ರಾಷ್ಟ್ರವ್ಯಾಪಿ ಅನ್ವಯವಾಗುವ ನೀತಿಯೊಂದನ್ನು ರೂಪಿಸುವ ಇಂಗಿತವನ್ನೂ ವ್ಯಕ್ತಪಡಿಸಿದೆ.

ರೇಬಿಸ್ ಸೋಂಕು ಹೊಂದಿದ ನಾಯಿಗಳು ರಸ್ತೆಯಲ್ಲಿ ಇರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ, ಅದರ ಅನುಷ್ಠಾನ ಅಷ್ಟು ಸುಲಭವಲ್ಲ. ನಾಯಿಯೊಂದು ಕಂಡ ಕಂಡ ಮನುಷ್ಯ, ಪ್ರಾಣಿಗಳಿಗೆ ಕಚ್ಚುತ್ತಾ ಹೋದಾಗಲಷ್ಟೇ ಅದಕ್ಕೆ ಹುಚ್ಚೆಂದು ಗೊತ್ತಾಗುವುದು. ಸೋಂಕಿತ ನಾಯಿಯಿಂದ ಕಚ್ಚಿಸಿಕೊಂಡವರು ಲಸಿಕೆ ತೆಗೆದುಕೊಳ್ಳದಿದ್ದರೆ ಅಪಾಯ ನಿಶ್ಚಿತ. ಹಾಗೆಯೇ ಆ ನಾಯಿಗಳಿಂದ ಕಚ್ಚಿಸಿಕೊಂಡ ಬೀದಿ ನಾಯಿಗಳಿಗೂ ಲಸಿಕೆ ಹಾಕಬೇಕು. ಇಲ್ಲದಿದ್ದರೆ ಅವುಗಳಿಗೂ ರೋಗ ತಗುಲಿ ಮತ್ತಷ್ಟು ಕಡೆ ಸೋಂಕು ಹರಡಿಸುತ್ತವೆ.

ಬೀದಿ ನಾಯಿಗಳಿಗೆ ಎಂದೋ ನೀಡಿದ್ದ ಒಂದು ಲಸಿಕೆ ಈಗ ಪ್ರಯೋಜನಕ್ಕೆ ಬಾರದು. ರೋಗ ಪ್ರತಿರೋಧ ಶಕ್ತಿ ಸುಸ್ಥಿತಿಯಲ್ಲಿ ಇರಬೇಕಿದ್ದರೆ ಪ್ರತಿ ವರ್ಷವೂ ಬೀದಿ ನಾಯಿಗಳನ್ನು ಹಿಡಿದು ಲಸಿಕೆ ಹಾಕಬೇಕು. ಇದು ವ್ಯಾವಹಾರಿಕವಾಗಿ ಸಾಧ್ಯವೇ? ಪ್ರತಿನಿತ್ಯ ನಾಯಿಗಳ ಮೇಲೆ ನಿಗಾ ಇರಿಸುವ ವ್ಯವಸ್ಥೆಯಾದರೂ ಎಲ್ಲಿದೆ? ಹಾಗಾಗಿ ನಾಯಿ ಕಡಿತದ ಪ್ರತಿ ಪ್ರಕರಣವನ್ನು ರೇಬಿಸ್ ದೃಷ್ಟಿಯಿಂದಲೇ ನೋಡಬೇಕಾದುದು ಅನಿವಾರ್ಯ. ನಮ್ಮ ರಾಜ್ಯವೊಂದರಲ್ಲೇ ಈ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಸುಮಾರು ಮೂರು ಲಕ್ಷದಷ್ಟು ನಾಯಿ ಕಡಿತದ ಪ್ರಕರಣಗಳು ದಾಖಲಾಗಿರುವುದನ್ನು ಗಮನಿಸಿದರೆ, ಪರಿಸ್ಥಿತಿ ಎಷ್ಟು ಗಂಭೀರವಾದುದು ಎನ್ನುವುದು ಅರಿವಾಗುತ್ತದೆ!

ನಾಯಿಗಳ ಮೇಲಿನ ಅತಿಯೆನಿಸುವಷ್ಟು ಸಾರ್ವಜನಿಕ ಅನುಕಂಪ, ಆಡಳಿತದ ನಿರ್ಲಕ್ಷ್ಯ, ಇಚ್ಛಾಶಕ್ತಿಯ ಕೊರತೆ, ಹೀಗೆ ಬೇರೆ ಬೇರೆ ಕಾರಣಗಳಿಂದ, ಹಲವು ದಶಕಗಳಿಂದ ಜೀವಂತವಾಗಿರುವ ಸಮಸ್ಯೆಯೊಂದು ಅಪಾಯಕಾರಿಯಾಗಿ ಬೆಳೆದಿದೆ ಹಾಗೂ ದಿನದಿಂದ ದಿನಕ್ಕೆ ಕಗ್ಗಂಟಾಗುತ್ತಲೇ ಸಾಗುತ್ತಿದೆ.

ಕರ್ನಾಟಕ ಸರ್ಕಾರ 2022ರ ಡಿಸೆಂಬರ್‌ನಲ್ಲಿ ರೇಬಿಸ್ ರೋಗವನ್ನು ಅಧಿಸೂಚಿತ ಕಾಯಿಲೆಯೆಂದು ಘೋಷಿಸಿದೆ. ಅದರನ್ವಯ, ಸರ್ಕಾರಿ ಮತ್ತು ಖಾಸಗಿ ಸೇರಿದಂತೆ ಎಲ್ಲಾ ವೈದ್ಯಕೀಯ ಸಂಸ್ಥೆಗಳು ನಾಯಿ ಕಡಿತ, ರೇಬಿಸ್ ಸೋಂಕಿನ ಪ್ರಕರಣಗಳನ್ನು ಸರ್ಕಾರಕ್ಕೆ ವರದಿ ಮಾಡುವುದು ಕಡ್ಡಾಯ. ಹಾಗಾಗಿ, ಕಳೆದ ಎರಡು ಮೂರು ವರ್ಷಗಳಿಂದ ನಿಖರವಾದ ಅಂಕಿಅಂಶಗಳು ದೊರಕುತ್ತಿವೆ. ಇದಕ್ಕಿಂತ ಹಿಂದೆಯೂ ನಾಯಿಗಳ ದಾಳಿಯಿಂದ ದೊಡ್ಡ ಪ್ರಮಾಣದಲ್ಲೇ ಸಾವುನೋವು ಸಂಭವಿಸುತ್ತಿದ್ದರೂ ಅವು ಹೆಚ್ಚಾಗಿ ವರದಿಯಾಗುತ್ತಿರಲಿಲ್ಲ. ಈಗ ಸಾಮಾಜಿಕ ಮಾಧ್ಯಮಗಳು ಹೆಚ್ಚು ಕ್ರಿಯಾಶೀಲವಾಗಿವೆ, ಇಂತಹ ಘಟನೆಗಳಿಗೆ ವ್ಯಾಪಕ ಪ್ರಚಾರ ಸಿಗುತ್ತಿರುವುದರಿಂದ ಬೇಗನೆ ಎಲ್ಲರ ಗಮನಕ್ಕೆ ಬರುತ್ತಿದೆ. ಜನರಲ್ಲೂ ನಾಯಿ ಕಡಿತ ಹಾಗೂ ರೇಬಿಸ್ ಕುರಿತಾಗಿ ಜಾಗೃತಿ ಮೂಡಿದೆ. ಹಾಗಾಗಿ, ವೈದ್ಯಕೀಯ ಸಲಹೆ, ಚಿಕಿತ್ಸೆಗೆ ಧಾವಿಸುತ್ತಿರುವವರ ಸಂಖ್ಯೆಯಲ್ಲಿ ಗಾಬರಿಯಾಗುವಷ್ಟು ಏರಿಕೆಯಾಗುತ್ತಿದೆ.

ನಾಯಿಗಳ ಆಕ್ರಮಣಶೀಲತೆಗೆ ಅವುಗಳಿಗೆ ಆಹಾರ ಕೊರತೆಯಾಗಿರುವುದೇ ಪ್ರಮುಖ ಕಾರಣವೆಂದು ಬಿಂಬಿಸಲಾಗುತ್ತಿದೆ. ಇದೊಂದು ಬಿಡುಬೀಸಾದ ಹೇಳಿಕೆಯೇ ಹೊರತು ಅದಕ್ಕೆ ಯಾವುದೇ ಆಧಾರವಿಲ್ಲ. ನಾಯಿಗಳು ಜನ, ಜಾನುವಾರು ಮೇಲೆ ಆಕ್ರಮಣ ಮಾಡಲು ಹತ್ತಾರು ಕಾರಣಗಳುಂಟು. ತನಗೆ ಅಪಾಯವೆದುರಾದ ಸಂದರ್ಭದಲ್ಲಿ ನಾಯಿ ಆಕ್ರಮಣ ಮಾಡುತ್ತದೆ. ಭಯಗೊಂಡಾಗ, ಭಾರೀ ಸದ್ದುಗದ್ದಲಗಳಿಂದ ಮಾನಸಿಕವಾಗಿ ಗಲಿಬಿಲಿಗೊಂಡಾಗ, ಸುಮ್ಮನಿದ್ದರೂ ಕೆಣಕಿದಾಗ, ಅದು ಮಲಗಿರುವಾಗ ಇಲ್ಲವೇ ಆಹಾರ ತಿನ್ನುವಾಗ ತೊಂದರೆ ಮಾಡಿದರೆ ಕೆರಳಿ ಕಚ್ಚುವುದುಂಟು. ಮರಿ ಹಾಕಿರುವಾಗ ಅವುಗಳ ರಕ್ಷಣೆಗಾಗಿ ತಾಯಿನಾಯಿ ಆಕ್ರಮಣ ಪ್ರವೃತ್ತಿ ತೋರುತ್ತದೆ. ನೋವು, ಕಾಯಿಲೆಯಿಂದ ಬಳಲುತ್ತಿರುವ ನಾಯಿಯನ್ನು ಮುಟ್ಟಲು ಹೋದಾಗ, ಅವು ಬೆದೆಗೆ ಬಂದಾಗ, ಹಸಿದಿರುವಾಗ, ವಿಚಿತ್ರ ವೇಷದವರು ಎದುರಾದಾಗಲೂ ದಾಳಿ ಮಾಡುವುದುಂಟು. ಇನ್ನು ಚಿಕ್ಕ ಮಕ್ಕಳು ನಾಯಿಗಳಿಗೆ ಅವುಗಳ ಮೂಲ ಸ್ವಭಾವದ ಕಾರಣ ಬೇಟೆ ಪ್ರಾಣಿಯಂತೆ ಕಾಣುವುದರಿಂದ ಅವರ ಮೇಲೆ ಹಠಾತ್ ಎರಗುತ್ತವೆ.

ಕೆಲವು ತಳಿಯ ಶ್ವಾನಗಳಲ್ಲಿ ವಂಶವಾಹಿಯ ಕಾರಣ ಸಿಟ್ಟು ಹಾಗೂ ಕಚ್ಚುವ ಪ್ರವೃತ್ತಿ ಹೆಚ್ಚು. ನಾಯಿಗಳು ಗುಂಪಿನಲ್ಲಿರುವಾಗ ಒಂದು ನಾಯಿ ಅಟ್ಟಿಸಿಕೊಂಡು ಬಂದರೆ, ಉಳಿದ ನಾಯಿಗಳು ಅದನ್ನು ಅನುಕರಿಸಿ ದಾಳಿಗೆ ಮುಂದಾಗುತ್ತವೆ. ಹಾಗಾಗಿ, ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗಲು ಅವುಗಳಿಗೆ ಸರಿಯಾಗಿ ಆಹಾರ ಸಿಗದಿರುವುದೇ ಕಾರಣವೆಂದು ಹೇಳುವುದು ಕೇವಲ ಮಿಥ್ಯಾರೋಪವಷ್ಟೆ.

ನಾಯಿಗಳನ್ನು ಶಾಂತವಾಗಿ ಇರಿಸಲು ಪ್ರತಿಯೊಬ್ಬರೂ ಬೀದಿ ನಾಯಿಗಳಿಗೆ ನಿತ್ಯ ಊಟ ಹಾಕಿ ಎನ್ನುವುದು ಹಾಸ್ಯಾಸ್ಪದ. ಇಂತಹದ್ದೇ ಕಾರಣಕ್ಕಾಗಿ ನಮ್ಮ ಬಿಬಿಎಂಪಿ ನಾಯಿಗಳಿಗೆ ಒಂದು ಹೊತ್ತು ಊಟ ಹಾಕುವ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿರುವುದು ಸಮರ್ಥನೀಯವಲ್ಲ. ನಾಯಿಗಳಿಗೆ ಚೆನ್ನಾಗಿ ಆಹಾರ ಸಿಕ್ಕಾಗ ಅವುಗಳ ವಂಶಾಭಿವೃದ್ಧಿ ಸಾಮರ್ಥ್ಯವೂ ಸಹಜವಾಗಿಯೇ ವೃದ್ಧಿಸುತ್ತದೆ. ಸುಲಭವಾಗಿ ಆಹಾರ ದೊರಕುವ ಕಡೆ ಅವುಗಳ ಗುಂಪೂ ದೊಡ್ಡದಾಗುತ್ತದೆ. ವಾಹನಗಳಿಗೆ ಅಡ್ಡ ಬಂದು ಅಪಘಾತಗಳಿಗೆ ಕಾರಣವಾಗುವ ಜೊತೆಗೆ ಸಮೂಹ ಸನ್ನಿಯಿಂದಾಗಿ ಮಕ್ಕಳು, ದುರ್ಬಲರ ಮೇಲೆ ಎರಗುವ ಸಂಭವವೂ ಹೆಚ್ಚು.



ಹಿಂದೆಲ್ಲಾ ನಾಯಿಗಳಲ್ಲಿ ಗರ್ಭಧಾರಣೆ ತಡೆಯುವ ಮಾತ್ರೆಗಳು ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಸಿಗುತ್ತಿದ್ದವು. ತಮ್ಮ ಮನೆಯ ಹೆಣ್ಣು ನಾಯಿ ಬೆದೆಗೆ ಬಂದಾಗ ಗುಳಿಗೆಗಳನ್ನು ಹಾಕುತ್ತಿದ್ದ ಮಾಲೀಕರು, ಅವು ಮರಿ ಹಾಕದಂತೆ ತಡೆಯುತ್ತಿದ್ದರು. ಇದು ಅವುಗಳ ಸಂಖ್ಯೆ ನಿಯಂತ್ರಣಕ್ಕೆ ಸುಲಭ ಮಾರ್ಗವಾಗಿತ್ತು. ಆದರೆ, ಈ ಔಷಧಗಳ ವ್ಯಾಪಕ ದುರುಪಯೋಗ, ದುಷ್ಪರಿಣಾಮದಂತಹ ಕಾರಣಗಳಿಂದ ಪೂರೈಕೆ ನಿಂತು ಹೋಗಿ ಹಲವು ವರ್ಷಗಳೇ ಆಗಿಹೋಗಿವೆ. ಈಗ ಗರ್ಭ ನಿರೋಧಕ ಅಥವಾ ಗರ್ಭಪಾತ ಮಾಡಿಸುವಂತಹ ಮಾತ್ರೆಗಳು ದೊರೆಯದ ಕಾರಣ ತಮ್ಮ ಮನೆಯ ನಾಯಿಗಳು ಮರಿ ಹಾಕಿದಾಗ ಸಾಕಲಾಗದೆ ಬೀದಿಗೆ ಬಿಡುವವರು ಹೆಚ್ಚಾಗಿದ್ದಾರೆ. ಗರ್ಭ ಧರಿಸುವುದನ್ನು ತಡೆಯುವ ಸುಧಾರಿತ ಔಷಧಗಳು ಪಶು ವೈದ್ಯಕೀಯ ಸಂಸ್ಥೆಗಳಲ್ಲಿ ಸುಲಭವಾಗಿ ಮತ್ತು ಉಚಿತವಾಗಿ ದೊರೆಯುವಂತಾದಾಗ, ನಾಯಿಗಳ ಸಂಖ್ಯೆಗೆ ಕಡಿವಾಣ ಹಾಕಲು ಸಾಧ್ಯವಿದೆ.

ಹೆಣ್ಣುನಾಯಿಗಳಲ್ಲಿ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ತುಸು ಕ್ಲಿಷ್ಟ ಮತ್ತು ದುಬಾರಿ. ಗರ್ಭಕೋಶವು ಶರೀರದ ಒಳಭಾಗದಲ್ಲಿ ಇರುವುದರಿಂದ ನಾಯಿಗೆ ಪ್ರಜ್ಞೆ ತಪ್ಪಿಸಿ, ಹೊಟ್ಟೆಯ ಮಾಂಸ ಪದರಗಳನ್ನು ಛೇದಿಸಿ, ಗರ್ಭಚೀಲವನ್ನು ತೆಗೆದು ಹಾಕಬೇಕಾಗುತ್ತದೆ. ಪ್ರಕ್ರಿಯೆಯ ನಂತರದ ತೊಡಕುಗಳ ಕಾರಣ ಐದಾರು ದಿನಗಳ ಕಾಲ ನಿಗಾ ವಹಿಸಬೇಕಾಗುತ್ತದೆ. ಅದೇ ಗಂಡು ನಾಯಿಗಳಲ್ಲಿ ವೃಷಣ ಚೀಲವು ಶರೀರದ ಹೊರಭಾಗದಲ್ಲಿ ಇರುವುದರಿಂದ ಈ ಪ್ರಕ್ರಿಯೆ ಸರಳ. ನಂತರದಲ್ಲಿ ತೊಂದರೆಗಳೂ ಕಡಿಮೆ. ಹೌದು, ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಆರ್ಥಿಕ ಸಂಪನ್ಮೂಲವಷ್ಟೇ ಅಲ್ಲ, ಕುಶಲ ಮಾನವ ಸಂಪನ್ಮೂಲದ ಕೊರತೆಯೂ ಇದೆ. ಸಿಬ್ಬಂದಿ ವರ್ಗದವರಿಗೆ ಸೂಕ್ತ ತರಬೇತಿ ನೀಡಿ ಗಂಡು ನಾಯಿಗಳಿಗೆ ಶಸ್ತ್ರಕ್ರಿಯೆ ಮಾಡಿಸಬಹುದು, ಪರಿಣತರ ಅಗತ್ಯವೂ ಇಲ್ಲ. ಹಾಗಾಗಿ, ಗಂಡುನಾಯಿಗಳನ್ನೇ ಕೇಂದ್ರೀಕರಿಸಿ ಜನನ ನಿಯಂತ್ರಣ ಕಾರ್ಯಕ್ರಮ ಹಮ್ಮಿಕೊಂಡಾಗ ವೆಚ್ಚವನ್ನು ತಗ್ಗಿಸಬಹುದಲ್ಲದೆ, ಪ್ರಕ್ರಿಯೆಗೂ ವೇಗ ತುಂಬಬಹುದು.

ಈ ಭೂಮಿಯಲ್ಲಿ ಮನುಷ್ಯ ಸೇರಿದಂತೆ ಎಲ್ಲಾ ಪಶು ಪಕ್ಷಿಗಳಿಗೂ ಬದುಕುವ ಹಕ್ಕಿದ್ದರೂ, ಕೆಲವು ಪ್ರಾಣಿಗಳಿಗೆ ಹೆಚ್ಚಿನ ಹಕ್ಕುಗಳನ್ನು ಒತ್ತಾಯಿಸುವುದು ಅಪಾಯಕಾರಿ ಆಗಬಲ್ಲದು ಎಂಬುದಕ್ಕೆ ಬೀದಿನಾಯಿಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಮತ್ತು ತತ್ಸಂಬಂಧದ ಮಾನವ ನಾಯಿ ಸಂಘರ್ಷವೇ ಸಾಕ್ಷಿ.

ಜನಜಾನುವಾರು ಸುರಕ್ಷತೆಯ ದೃಷ್ಟಿಯಿಂದ ನಾಯಿಗಳಿಗೆ ಕನಿಷ್ಠ ಸೌಲಭ್ಯವುಳ್ಳ ಪಾಲನಾ ಕೇಂದ್ರಗಳನ್ನು ತೆರೆದು, ಅವುಗಳು ಬೀದಿಯ ಮೇಲೆ ಅಲೆಯದಂತೆ ನೋಡಿಕೊಳ್ಳುವುದು ಕಷ್ಟವಾದರೂ ಅಸಾಧ್ಯವಲ್ಲ. ಸಂಖ್ಯೆ ಮಿತಿ ಮೀರಿ ಅನಾಹುತಗಳಾಗುತ್ತಿರುವ ಈ ಹೊತ್ತಿನಲ್ಲಿ ನಾಯಿಗಳ ಹಕ್ಕಿನ ವಿಚಾರದಲ್ಲಿ ಇರುವ ಸೂಕ್ಷ್ಮಗಳ ಬಗ್ಗೆ ಚರ್ಚಿಸುವುದು ಹಾಗೂ ಸೂಕ್ತ ಪರಿಹಾರ ಕಂಡುಕೊಳ್ಳುವುದು ಇಂದಿನ ತುರ್ತು.

**- ಮುಖ್ಯ ಪಶು** ವೈದ್ಯಾಧಿಕಾರಿ

# ರಾಷ್ಟ್ರೀಯ ಮಹಿಳಾ ಸಮಾನತೆ ದಿನ

ಪ್ರತಿ ವರ್ಷ ಆಗಸ್ಟ್ 26 ರಂದು, ನಾವು ರಾಷ್ಟ್ರೀಯ ಮಹಿಳಾ ಸಮಾನತೆ ದಿನದೊಂದಿಗೆ ಈ ಹಕ್ಕನ್ನು ಸ್ಮರಿಸುತ್ತೇವೆ. 1920 ರಲ್ಲಿ ಈ ದಿನದಂದು ಯುನೈಟೆಡ್ ಸ್ಟೇಟ್ ಕಾಂಗ್ರೆಸ್ ಸಂವಿಧಾನದ 19 ನೇ ತಿದ್ದುಪಡಿಯನ್ನು ಅಂಗೀಕರಿಸಿತು, ಇದು ಮಹಿಳೆಯರಿಗೆ ಪೂರ್ಣ ಮತ್ತು ಸಮಾನ ಮತದಾನದ ಹಕ್ಕುಗಳನ್ನು ನೀಡಿತು.

**ಒಂದು ಚಳವಳಿಯ ಜನನ:** 1840 ರ ವಿಶ್ವ ಗುಲಾಮಗಿರಿ ವಿರೋಧಿ ಸಮಾವೇಶದಲ್ಲಿ ಲಂಡನ್‌ನಲ್ಲಿದ್ದಾಗ, ಮಹಿಳಾ ಹಕ್ಕುಗಳ ಆಂದೋಲನಕ್ಕೆ ಬೀಜಗಳನ್ನು ನೆಡಲು ಹಲವಾರು ಮಹಿಳೆಯರಿಗೆ ಸಮಾವೇಶದ ಮಹಡಿಗೆ ಪ್ರವೇಶ ನಿರಾಕರಿಸಲಾಯಿತು. ಲುಕ್ರೆಟಿಯಾ ಮೋಟ್ ಮತ್ತು ಎಲಿಜಬೆತ್ ಕ್ಯಾಡಿ ಸ್ಟೇಟನ್, ಮಾರ್ಥಾ ರೈಟ್, ಮೇರಿ ಆನ್ ಮೆಕ್‌ಕ್ಲಿಂಟಾಕ್ ಮತ್ತು ಜೇನ್ ಹಂಟ್ ಅವರೊಂದಿಗೆ ನ್ಯೂಯಾರ್ಕ್‌ನ ಸೆನೆಕಾ ಫಾಲ್ಸ್‌ನಲ್ಲಿ ನಡೆದ ಮೊದಲ ಮಹಿಳಾ ಹಕ್ಕುಗಳ ಸಮಾವೇಶಕ್ಕಾಗಿ ಯೋಜನೆಗಳನ್ನು ರೂಪಿಸಿದರು. ಜುಲೈ 19-20, 1848 ರಂದು ವೆಸ್ಲಿಯನ್ ಚಾಪೆಲ್‌ನಲ್ಲಿ ನಡೆದ ಈ ಸಮ್ಮೇಳನವು ಮೊದಲ ದಿನ 200 ಮಹಿಳೆಯರನ್ನು ಸೆಳೆಯಿತು. ಎರಡನೇ ದಿನ, ಸಮಾವೇಶವು ಪುರುಷರಿಗೆ ಮುಕ್ತವಾಯಿತು ಮತ್ತು ಕೆಲವರು ಹಾಜರಿದ್ದರು.

ಈ ದೇಶದ ಮಹಿಳೆಯರು ಚುನಾಯಿತ ಮತದಾನದ ಪವಿತ್ರ ಹಕ್ಕನ್ನು ತಮ್ಮದಾಗಿಸಿಕೊಳ್ಳುವುದು ಅವರ ಕರ್ತವ್ಯ ಎಂದು ನಿರ್ಧರಿಸಲಾಗಿದೆ. 1848 ರ ಸೆನೆಕಾ ಫಾಲ್ಸ್ ಸಮಾವೇಶದ 9 ನೇ ನಿರ್ಣಯ.

ಸಮಾವೇಶದ ಸಮಯದಲ್ಲಿ, ನಾಯಕರು 12 ನಿರ್ಣಯಗಳನ್ನು ಮಂಡಿಸಿದರು. ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ಕಾನೂನುಬದ್ಧವಾಗಿ ಮತ್ತು ಪ್ರತಿನಿಧಿಯಾಗಿ ಪುರುಷರಿಗೆ ಸಮಾನರಾಗಿರಬೇಕು ಎಂಬ ಹಕ್ಕುಗಳನ್ನು ಅವರು ಪಟ್ಟಿ ಮಾಡಿದರು. ನಿರ್ಣಯಗಳಲ್ಲಿ, 9 ನೇ ನಿರ್ಣಯವನ್ನು ಹೊರತುಪಡಿಸಿ ಉಳಿದೆಲ್ಲವೂ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಮತದಾನದ ಹಕ್ಕು ಕಳವಳವನ್ನು ಉಂಟುಮಾಡಿತು. ಅನೇಕ ಮಹಿಳೆಯರು ಇದು ತಮ್ಮ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳುವಂತೆ ಮಾಡುತ್ತದೆ ಎಂದು ಭಾವಿಸಿದರು. ಆದಾಗ್ಯೂ, ಹೆಚ್ಚಿನ ಚರ್ಚೆ ಮತ್ತು ನಿರ್ಮೂಲನವಾದಿ ಫ್ರೆಡೆರಿಕ್ ಡೌಗ್ಲಾಸ್ ಅವರ ಬೆಂಬಲದ ನಂತರ, 9 ನೇ ನಿರ್ಣಯವನ್ನು ಸ' ಹ' ಅಂಗೀಕರಿಸಲಾಯಿತು.




**ಮತದಾನದ ಹಕ್ಕು:** ಆಗ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಮಹಿಳಾ ಮತದಾನದ ಹಕ್ಕು ತೀವ್ರವಾಗಿ ಆರಂಭವಾಯಿತು. ಮತ್ತೊಬ್ಬ ವಕೀಲೆ ಸುಸಾನ್ ಬಿ. ಆಂಥೋನಿ 1869 ರಲ್ಲಿ ಸ್ಟಾಂಟನ್ ಜೊತೆ ಸೇರಿ ರಾಷ್ಟ್ರೀಯ ಮಹಿಳಾ ಮತದಾನದ ಹಕ್ಕು ಸಂಘವನ್ನು ರಚಿಸಿದರು. ಸುಮಾರು ಹತ್ತು ವರ್ಷಗಳ ಪರಿಶ್ರಮ ಮತ್ತು ಲಾಬಿಯ ಮೂಲಕ, 1878 ರಲ್ಲಿ ತಿದ್ದುಪಡಿಯನ್ನು ಪರಿಚಯಿಸಿತು. ವರ್ಷಗಳ ಚರ್ಚೆಯ ಹೊರತಾಗಿಯೂ ಮತ್ತು ಅಂತಿಮವಾಗಿ 1886 ರಲ್ಲಿ ಕಾಂಗ್ರೆಸ್‌ನ ಮಹಡಿಗೆ ಹೋದರೂ, ಸೋಲನ್ನು ಅನುಭವಿಸಬೇಕಾಯಿತು.

ಅಂತಿಮವಾಗಿ, ಕಾಂಗ್ರೆಸ್‌ಗೆ ಹೊಸ ತಿದ್ದುಪಡಿ ಬರಲು ಇನ್ನೂ 34 ವರ್ಷಗಳು ಬೇಕಾಯಿತು. ಹಲವಾರು ವರ್ಷಗಳ ಕಾಲ, ವಕೀಲರು ದಂಡಗಳನ್ನು ರವಾನಿಸುತ್ತಲೇ ಇದ್ದರು. ಹೊಸ ರಾಜ್ಯಗಳು ಒಕ್ಕೂಟವನ್ನು ಪ್ರವೇಶಿಸಿದವು. ಅವರ ಸಂವಿಧಾನಗಳು ಮಹಿಳೆಯರಿಗೆ ಮೊದಲು ಎಂದಿಗೂ ಹೊಂದಿರದ ಹಕ್ಕುಗಳನ್ನು ಒಳಗೊಂಡಿವೆ - ಮತದಾನದ ಹಕ್ಕು. ನಾಗರಿಕ ಅಸಹಕಾರವು ಸಂಭವಿಸಿತು. ಅಂತಿಮವಾಗಿ, ಮಹಿಳೆಯರು ಸಮಾನತೆಯನ್ನು ಪಡೆಯುವುದರೊಂದಿಗೆ, ಕಾಂಗ್ರೆಸ್ ಸಂವಿಧಾನದ 19 ನೇ ತಿದ್ದುಪಡಿಯನ್ನು ಅಂಗೀಕರಿಸಿತು.

**ಮಹಿಳಾ ಸಮಾನತೆ ದಿನವನ್ನು ಹೇಗೆ ಆಚರಿಸುವುದು:** ಮಹಿಳಾ ನಾಗರಿಕ ಹಕ್ಕುಗಳ ಚಳುವಳಿ ಮತ್ತು 19 ನೇ ತಿದ್ದುಪಡಿಯ ಬಗ್ಗೆ ಇನ್ನಷ್ಟು ತಿಳಿಯಿರಿ. ಎಲಿಜಬೆತ್ ಕ್ಯಾಡಿ ಸ್ಟಾಂಟನ್ ಮತ್ತು ಸುಸಾನ್ ಬಿ. ಆಂಥೋನಿ ಬಗ್ಗೆ ಓದಿ. ಇತಿಹಾಸವನ್ನು ಇನ್ನಷ್ಟು ಆಳವಾಗಿ ಅಧ್ಯಯನ ಮಾಡಿ ಮತ್ತು ನಿಮ್ಮ ತಾಯ್ನಾಡಿನಲ್ಲಿ ವಕೀಲರ ಪ್ರಯತ್ನಗಳ ಬಗ್ಗೆ ತಿಳಿಯಿರಿ. ಲೂಸಿ ಸ್ಟೋನ್, ಕ್ಯಾರಿ ಚಾಪ್ಮನ್ ಕ್ಯಾಟ್ ಅಥವಾ ಆಲಿಸ್ ಪಾಲ್ ಅವರನ್ನು ಅಧ್ಯಯನ ಮಾಡಿ. ನಾವು ನಿಮಗಾಗಿ ಕೆಲವು ಕೆಲಸಗಳನ್ನು ಮಾಡಿದ್ದೇವೆ.

**ರಾಷ್ಟ್ರೀಯ ಮಹಿಳಾ ಸಮಾನತೆಯ ದಿನದ ಇತಿಹಾಸ:** ಜುಲೈ 30, 1971 ರಂದು, ಪ್ರತಿನಿಧಿ ಬೆಲ್ಲಾ ಅಬ್ಜುಗ್ (ಡಿ-ಎನ್‌ವೈ) ಆಗಸ್ಟ್ 26 ಅನ್ನು ಮಹಿಳಾ ಸಮಾನತೆ ದಿನವೆಂದು ಗೊತ್ತುಪಡಿಸುವ ಮಸೂದೆಯನ್ನು ಮಂಡಿಸಿದರು. ಆ ವರ್ಷ, ಆಗಸ್ಟ್ 26 ರಂದು ದೇಶಾದ್ಯಂತ ರ್ಯಾಲಿಗಳು, ಆಚರಣೆಗಳು ಮತ್ತು ರಾಜಕೀಯ ಚರ್ಚೆಗಳು ನಡೆದವು. 1973 ರ ಹೊತ್ತಿಗೆ, ಕಾಂಗ್ರೆಸ್ ಪ್ರತಿ ವರ್ಷ ಆಗಸ್ಟ್ 26 ರಂದು ಈ ದಿನವನ್ನು ಆಚರಿಸಬೇಕೆಂದು ಘೋಷಿಸುವ ಜಂಟಿ ನಿರ್ಣಯವನ್ನು ಅಂಗೀಕರಿಸಿತು. ಪ್ರತಿ ವರ್ಷ ಪ್ರತಿಯೊಬ್ಬ ಅಧ್ಯಕ್ಷರು ಈ ದಿನವನ್ನು ಯುನೈಟೆಡ್ ಸ್ಟೇಟ್ಸ್ ಸಂವಿಧಾನದ 19 ನೇ ತಿದ್ದುಪಡಿಯ ಪ್ರಮಾಣೀಕರಣವನ್ನು ಸ್ಮರಿಸುವ ಮಹಿಳಾ ಸಮಾನತೆ ದಿನವೆಂದು ಘೋಷಿಸಿದರು.

